# ಕೋಚಿಂಗ್ ಸೆಂಟರ್(ತರಬೇತಿ ಕೇಂದ್ರ)ನ ನಿಯಂತ್ರಣಕ್ಕಾಗಿ ಮಾರ್ಗಸೂಚಿಗಳು

**ಜನವರಿ 2024**

**ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯ**

**ಭಾರತ ಸರ್ಕಾರ**

**ಹಿನ್ನೆಲೆ**

1. ಹೆಚ್ಚುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು, ಬೆಂಕಿ ಅವಘಡಗಳು, ಸೌಲಭ್ಯಗಳ ಕೊರತೆ ಹಾಗೂ ಬೋಧನಾ ವಿಧಾನಗಳ ಹಿನ್ನೆಲೆಯಲ್ಲಿ ಖಾಸಗಿ ಕೋಚಿಂಗ್ ಸೆಂಟರ್‌ಗಳಿಗೆ ಸಂಬಂಧಿಸಿದ ಸಮಸ್ಯೆಗಳು ಕಾಲಕಾಲಕ್ಕೆ ಸರ್ಕಾರದ ಗಮನವನ್ನು ಸೆಳೆಯುತ್ತಿವೆ.
2. ಯಾವುದೇ ನಿಗದಿತ ನೀತಿ ಅಥವಾ ನಿಯಂತ್ರಣ ಇಲ್ಲದೆ ಇರುವುದರಿಂದ ದೇಶದಲ್ಲಿ ಅನಿಯಂತ್ರಿತ ಖಾಸಗಿ ಕೋಚಿಂಗ್ ಸೆಂಟರ್‌ಗಳ ಸಂಖ್ಯೆಯು ಬೆಳೆಯುತ್ತಲೇ ಇದೆ. ಇಂತಹ ಕೇಂದ್ರಗಳು ವಿದ್ಯಾರ್ಥಿಗಳಿಂದ ದುಬಾರಿ ಶುಲ್ಕ ವಸೂಲಿ ಮಾಡುವ ನಿದರ್ಶನಗಳು, ವಿದ್ಯಾರ್ಥಿಗಳ ಮೇಲೆ ಅನಗತ್ಯ ಒತ್ತಡದ ಪರಿಣಾಮವಾಗಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವುದು, ಬೆಂಕಿ ಮತ್ತು ಇತರ ಅಪಘಾತಗಳಿಂದ ಅಮೂಲ್ಯವಾದ ಜೀವಗಳ ಹಾನಿ, ಮತ್ತು ಈ ಕೇಂದ್ರಗಳು ಅಳವಡಿಸಿಕೊಳ್ಳುವ ಹಲವಾರು ಅವ್ಯವಹಾರಗಳು ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗುತ್ತವೆ.
3. ಈ ಸಮಸ್ಯೆಗಳ ಬಗ್ಗೆ ಚರ್ಚೆಗಳು, ವಾದಗಳು ಮತ್ತು ಪ್ರಶ್ನೆಗಳ ಮೂಲಕ ಸಂಸತ್ತಿನಲ್ಲಿ ಹಲವಾರು ಬಾರಿ ಪ್ರಸ್ತಾಪವನ್ನೂ ಮಾಡಲಾಗಿದೆ.
4. +2 ಹಂತದ ಶಿಕ್ಷಣದ ನಿಯಂತ್ರಣವು ರಾಜ್ಯ / ಕೇಂದ್ರಾಡಳಿತ (ಯುಟಿ) ಸರ್ಕಾರಗಳ ಜವಾಬ್ದಾರಿಯಾಗಿದೆ ಎಂದು ಪರಿಗಣಿಸಿದ್ದರಿಂದ ಈ ಸಂಸ್ಥೆಗಳನ್ನು ರಾಜ್ಯ / ಕೇಂದ್ರಾಡಳಿತ (ಯುಟಿ) ಸರ್ಕಾರಗಳು ಉತ್ತಮವಾಗಿ ನಿಯಂತ್ರಿಸುತ್ತವೆ.
5. ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾ Vs UOI ಮತ್ತು ಇತರರ ವಿಷಯದಲ್ಲಿ 2013 ರ WP (ರಿಟ್ ಅರ್ಜಿ) ಸಂಖ್ಯೆ. 456 ರಲ್ಲಿ ಭಾರತದ ವಿದ್ಯಾರ್ಥಿ ಒಕ್ಕೂಟ, ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು (PIL) ಗೌರವಾನ್ವಿತ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಲಾಯಿತು, ಇದರಲ್ಲಿ ಶಿಕ್ಷಣ ಸಚಿವಾಲಯವೂ ಪ್ರತಿವಾದಿಗಳಲ್ಲಿ ಒಂದಾಗಿದೆ. 03.02.2017 ರ ಮಧ್ಯಂತರ ದಿನಾಂಕದ ಆದೇಶದ ಮೂಲಕ ಪಿಐಎಲ್ ಅನ್ನು ಇತ್ಯರ್ಥ ಮಾಡಲಾಗಿದ್ದು, ಅರ್ಜಿಯಲ್ಲಿ ಪ್ರಸ್ತಾಪಿಸಲಾದ ವಿಷಯವು ಮುಖ್ಯವಾಗಿದ್ದರೂ ಮೂಲಭೂತವಾಗಿ ನೀತಿಯ ವಿಷಯವಾಗಿದೆ. ಕಾನೂನಿನ ಪ್ರಕಾರ ಅದನ್ನು ಪರಿಗಣಿಸಬಹುದಾದ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಸಮಸ್ಯೆಯನ್ನು ಎತ್ತಲು ಅರ್ಜಿದಾರರಿಗೆ ಮುಕ್ತ ಅವಕಾಶವಿರುತ್ತದೆ.
6. ಸಂಸತ್ತಿನಲ್ಲಿ ಮತ್ತು ಅಶೋಕ್ ಮಿಶ್ರಾ ಸಮಿತಿಯ ವರದಿಯಲ್ಲಿ ವಿಸ್ತೃತ ಚರ್ಚೆಯ ವಿಷಯವಾಗಿರುವ ಖಾಸಗಿ ಕೋಚಿಂಗ್‌ನ ನಿಯಂತ್ರಣದ ಸಮಸ್ಯೆಯ ಸಂದರ್ಭದಲ್ಲಿ, ಪತ್ರ ಸಂಖ್ಯೆ. 32-6/2017-TS I ದಿನಾಂಕ 04.04.2017 ಉನ್ನತ ಶಿಕ್ಷಣ ಇಲಾಖೆಯು ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಿಗೆ, ಅಡ್ಡಹಾದಿಯಲ್ಲಿ ನಡೆಯುವ ಸಂಸ್ಥೆಗಳ ವಿರುದ್ಧ ನಿಯಂತ್ರಣ ಮಾಡಿ ಕಟ್ಟುನಿಟ್ಟಾದ ಶಿಕ್ಷೆ ವಿಧಿಸುವ ಕ್ರಮ ಕೈಗೊಳ್ಳಬೇಕೆಂದು

ವಿನಂತಿಸಿದೆ. ಈ ಪತ್ರದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಯನ್ನು ತಡೆಯಲು ನ್ಯಾಯಮೂರ್ತಿ ರೂಪನ್ವಾಲ್ ತನಿಖಾ ಆಯೋಗವು ಸೂಚಿಸಿದ 12 ಕ್ರಮಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ ರಾಜ್ಯಗಳನ್ನು / ಕೇಂದ್ರಾಡಳಿತ ಪ್ರದೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ ಕೋರಲಾಗಿದೆ.

7. 14.08.2019 ರ ದಿನಾಂಕದ 32-6/2017-TS.I ಪತ್ರದಲ್ಲಿ, ಕೋಚಿಂಗ್ ಸೆಂಟರ್‌ಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ವ್ಯಾಪ್ತಿಯಲ್ಲಿರುವ ಕೋಚಿಂಗ್ ಸೆಂಟರ್‌ಗಳನ್ನು ಸೂಕ್ತ ಕಾನೂನು ಚೌಕಟ್ಟಿನ ಮೂಲಕ ನಿಯಂತ್ರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ವಿನಂತಿಸಲಾಗಿದೆ, ಈ ಕೋಚಿಂಗ್ ಸೆಂಟರ್‌ಗಳಲ್ಲಿ ಹೆಚ್ಚಿನವು ಶಾಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತವೆ ಮತ್ತು ಆದ್ದರಿಂದ ರಾಜ್ಯ / ಕೇಂದ್ರಾಡಳಿತ ಸರ್ಕಾರದ ನೇರ ವ್ಯಾಪ್ತಿಗೊಳಪಟ್ಟಿವೆ.

8. ಅದೂ ಅಲ್ಲದೆ, ದಿನಾಂಕ 24.12.2020, ರ ಪತ್ರ ಸಂಖ್ಯೆ. 32-18/2020-TS I ನೋಡಿದಾಗ 04.04.2017 ಮತ್ತು 14.08.2019 ರ ಪತ್ರಗಳನ್ನು ಉಲ್ಲೇಖಿಸುತ್ತಾ, ಈ ತರಬೇತಿ ಕೇಂದ್ರಗಳನ್ನು ಸೂಕ್ತ ಕಾನೂನು ಚೌಕಟ್ಟಿನ ಮೂಲಕ ನಿಯಂತ್ರಿಸಲು, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ರಕ್ಷಣೆಯನ್ನು ಕಾಪಾಡಲು ಮತ್ತು ಅನಗತ್ಯ ಶೋಷಣೆಯನ್ನು ತಪ್ಪಿಸಲು ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳನ್ನು ಕೋರಲಾಯಿತು.

9. ಸಂಬಂಧಪಟ್ಟವರೊಂದಿಗೆ ವಿವರವಾದ ಸಮಾಲೋಚನೆಯನ್ನು ನಡೆಸಿದ ನಂತರ ರಾಷ್ಟ್ರೀಯ ಶಿಕ್ಷಣ ನೀತಿ 2020 (NEP 2020) ಅನ್ನು 29.07.2020 ರಂದು ಪ್ರಕಟಿಸಲಾಗಿದೆ. NEP 2020 ರ ಮೂಲಭೂತ ತತ್ವಗಳಲ್ಲಿ ಒಂದಾದ *'ಇಂದಿನ 'ಕೋಚಿಂಗ್ ಸಂಸ್ಕೃತಿ'ಯನ್ನು ಪ್ರೋತ್ಸಾಹಿಸುವ ಒಟ್ಟಾರೆ ಮೌಲ್ಯಮಾಪನಕ್ಕಿಂತ ಕಲಿಕೆಯ ಮಾಮೂಲಿ ದೀರ್ಘಕಾಲಿಕ ಮೌಲ್ಯಮಾಪನದ ಬಗ್ಗೆ ಕೇಂದ್ರೀಕರಿಸಲಾಗಿದೆ.*

10. *ಸೆಕೆಂಡರಿ ಶಾಲೆಗಳಲ್ಲಿನ ಇಂದಿನ ಪರೀಕ್ಷೆಗಳ ಸ್ವರೂಪ, ರೀತಿ ಬೋರ್ಡ್ ಪರೀಕ್ಷೆಗಳು ಮತ್ತು ಪ್ರವೇಶ ಪರೀಕ್ಷೆಗಳೂ ಸೇರಿದಂತೆ ಹಾಗೂ ಅವುಗಳ ಪರಿಣಾಮವಾಗಿ ಆಗಿರುವ ಇವತ್ತಿನ ಕೋಚಿಂಗ್ ಸಂಸ್ಕೃತಿ ಹಾನಿಕರ ಪರಿಣಾಮ ಉಂಟುಮಾಡುತ್ತಿದೆ* ಎಂಬುದನ್ನು NEP 2020 ತನ್ನ ಪ್ಯಾರ 4.36 ರಲ್ಲಿ ಗುರುತಿಸಲಾಗಿದೆ.

11. NEP 2020 ರ 4.37 ಪ್ಯಾರವು ಈ *ಕೋಚಿಂಗ್ ತರಗತಿಗಳ ಅಗತ್ಯವನ್ನು ವರ್ಜಿಸುವ ದೃಷ್ಟಿಯಿಂದ ಬೋರ್ಡ್ ಮತ್ತು ಪ್ರವೇಶ ಪರೀಕ್ಷೆಗಳ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರಲು ಸೂಚಿಸುತ್ತದೆ.*

12. ಪ್ಯಾರ 4.38 ಇತರ ವಿಷಯಗಳ ಜೊತೆ, ಹೆಚ್ಚು ಮುಕ್ತವಾದ ಹೆಚ್ಚಿನ ಹೊಂದಾಣಿಕೆ, ಹೆಚ್ಚಿನ ನಮ್ಯತೆ, ವಿದ್ಯಾರ್ಥಿಗಳ ಆಯ್ಕೆ, ಎರಡು ಪ್ರಯತ್ನಗಳಲ್ಲಿ ಉತ್ತಮವಾದ ಒಂದನ್ನು ಪರಿಗಣಿಸುವುದು, ಮುಖ್ಯವಾಗಿ ಮೂಲ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವಂತಹ ವ್ಯವಸ್ಥೆ, ಮತ್ತು ಒತ್ತಡವನ್ನು ಕಡಿಮೆಮಾಡುವ

ಹಾಗೂ ಕೋಚಿಂಗ್ ಸಂಸ್ಕೃತಿಯನ್ನು ತಗ್ಗಿಸುವ  ಕಾರ್ಯಸಾಧ್ಯವಾದ ಮಾದರಿಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಸೂಚಿಸುತ್ತದೆ.

13. 'ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆಗಳಿಗಾಗಿ ಗೊತ್ತುಪಡಿಸಲಾಗಿರುವ ತತ್ವ ವಿಧಾನಗಳು ಸಮಾನವಾಗಿರುತ್ತವೆ'. ರಾಷ್ಟ್ರೀಯ ಪರೀಕ್ಷಣ ಏಜೆನ್ಸಿ (NTA)ಯು ಉನ್ನತ ಗುಣಮಟ್ಟದ ಸಾಮಾನ್ಯ ಕೌಶಲ ಪರೀಕ್ಷೆಯನ್ನು ಆಧರಿಸಿದ ಸಾರ್ವತ್ರಿಕ ಪರೀಕ್ಷಣ ಪದ್ಧತಿಯನ್ನು ಪ್ರಸ್ತುತಪಡಿಸಲು ಕಾರ್ಯೋನ್ಮುಖವಾಗುತ್ತದೆ ಹಾಗೂ ವಿಜ್ಞಾನಗಳು, ಮಾನವಿಕಗಳು, ಭಾಷೆಗಳು, ಕಲೆಗಳು ಹಾಗೂ ವೃತ್ತಿಪರ ವಿಷಯಗಳನ್ನು ಕುರಿತಂತೆ ಕನಿಷ್ಠಪಕ್ಷ ವರ್ಷಕ್ಕೆ ಎರಡು ಬಾರಿಯಾದರೂ ವಿಶೇಷ ಸಾರ್ವತ್ರಿಕ ವಿಷಯ ಪರೀಕ್ಷೆಗಳನ್ನು ನಡೆಸಲು ಕೂಡ ಕಾರ್ಯವಿಧಾನ ಒದಗಿಸಲು ಶ್ರಮಿಸುತ್ತದೆ. ಈ ಪರೀಕ್ಷೆಗಳು ಅಭ್ಯರ್ಥಿಗಳು ಮೂಲತತ್ತ್ವಗಳ ಆಳವಾದ ಅರಿವನ್ನು ಎಷ್ಟರಮಟ್ಟಿಗೆ ಹೊಂದಿದ್ದಾರೆ ಹಾಗೂ ತಮ್ಮ ತಿಳಿವಳಿಕೆಯನ್ನು ಪ್ರಾಯೋಗಿಕವಾಗಿ ಬಳಕೆ ಮಾಡಬಲ್ಲರು ಎಂಬುದನ್ನು ಪರೀಕ್ಷಿಸುತ್ತವೆ ಹಾಗೂ ಇಂತಹ ಪರೀಕ್ಷೆಗಳಿಗಾಗಿ ತರಬೇತಿ ತೆಗೆದುಕೊಳ್ಳಬೇಕಾದ ಅಗತ್ಯವನ್ನು ಇಲ್ಲವಾಗಿಸುತ್ತವೆ. ವಿದ್ಯಾರ್ಥಿಗಳಿಗೆ ಪರೀಕ್ಷೆಗಾಗಿ ಅಧ್ಯಯನ ವಿಷಯಗಳನ್ನು ಆಯ್ಕೆಮಾಡಿಕೊಳ್ಳುವ ಅವಕಾಶವಿರುತ್ತದೆ ಹಾಗೂ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಪ್ರತಿಯೊಂದು ವಿರ್ದಾರ್ಥಿಯ ವಿಷಯವನ್ನೂ ಅವರ ಕಾರ್ಯಕ್ಷಮತೆಯನ್ನು ಪರಿಶೀಲಿಸಿ ಅವರ ವೈಯಕ್ತಿಕ ಆಸಕ್ತಿ ಮತ್ತು ಕೌಶಲ್ಯಗಳಿಗೆ ಅನುಗುಣವಾಗಿ ಬೇರೆಬೇರೆ ಅಧ್ಯಯನ ವಿಷಯಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳಲು ಸಾಧ್ಯವಾಗುತ್ತದೆ' ಎಂದು NEP 2020 ರ ಪ್ಯಾರ 4.42 ಹೇಳುತ್ತದೆ.

14. ಇತ್ತೀಚೆಗೆ ಹೊರಡಿಸಿದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ (National Curriculum Framework) ಕೋಚಿಂಗ್ ಸಂಸ್ಕೃತಿಯ ನಿರ್ಮೂಲನೆಗೆ ಸಂಬಂಧಿಸಿದ ಕಾರ್ಯತಂತ್ರವನ್ನು ವಿವರವಾಗಿ ಚರ್ಚಿಸಲಾಗಿದೆ.

15. ಸಾಮಾನ್ಯ ವಿಶ್ವವಿದ್ಯಾನಿಲಯ ಪ್ರವೇಶ ಪರೀಕ್ಷೆ (CUET) ಯನ್ನು 13 ಪ್ರಾದೇಶಿಕ ಭಾಷೆಗಳಲ್ಲಿ ನಡೆಸುವುದು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ (HEIs) ಸೀಟುಗಳ ಸಂಖ್ಯೆಯ ಗಣನೀಯ ವಿಸ್ತರಣೆಯಂತಹ ಸಮಸ್ಯೆಗಳನ್ನು ಪರಿಹರಿಸಲು ಹೆಚ್ಚು ಹೆಚ್ಚು ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮಾಡಲು NEP, 2020 ಗೆ ಅನುಗುಣವಾಗಿ ಸರ್ಕಾರವು ಉಪಕ್ರಮಗಳನ್ನು ಕೈಗೊಂಡಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF) ಪ್ರಸ್ತುತ ಅನಪೇಕ್ಷಣೀಯ ಪರಿಸ್ಥಿತಿಗೆ ಕೊಡುಗೆ ನೀಡುವ ಶಾಲೆಗಳಲ್ಲಿನ ಪಠ್ಯಕ್ರಮದ ವಿಷಯಗಳು ಮತ್ತು ಬೋರ್ಡ್ ಪರೀಕ್ಷೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಹರಿಸಲು ಸರಕಾರ ಸ್ಪಷ್ಟ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

16. NEET (UG) ಮತ್ತು JEE (ಮುಖ್ಯ) ಪ್ರವೇಶ ಪರೀಕ್ಷೆಗಳಿಗೆ ಉತ್ತಮವಾಗಿ ಅಭ್ಯಾಸ ನಡೆಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA), ಅಭ್ಯರ್ಥಿಗಳಿಗೆ ಅಂತರ್ಜಾಲದ ಮೂಲಕ ಉತ್ತಮ

ಗುಣಮಟ್ಟದ ಅಣಕು ಪರೀಕ್ಷೆಗಳಿಗೆ ಪ್ರವೇಶವನ್ನು ಸುಲಭಗೊಳಿಸಲು ಮೊಬೈಲ್ ಅಪ್ಲಿಕೇಷನ್ 'ನ್ಯಾಷನಲ್ ಟೆಸ್ಟ್ ಅಭ್ಯಾಸ್' ಅನ್ನು ಉಚಿತವಾಗಿ ಬಿಡುಗಡೆ ಮಾಡಲು ಆದೇಶ ಮಾಡಿದೆ.

17. ತಪ್ಪುದಾರಿಗೆಳೆಯುವ ಜಾಹೀರಾತುಗಳನ್ನು ಪ್ರಕಟಿಸುವ ಕೋಚಿಂಗ್ ಸೆಂಟರ್‌ಗಳು / ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳ ವಿರುದ್ಧ ಗ್ರಾಹಕ ಸಂರಕ್ಷಣಾ ಕಾಯಿದೆ, 1986 ರ ನಿಬಂಧನೆಗಳ ಅಡಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಗ್ರಾಹಕ ವ್ಯವಹಾರಗಳ ಇಲಾಖೆಯೊಂದಿಗೆ ಈ ವಿಷಯವನ್ನು ಕೈಗೆತ್ತಿಕೊಳ್ಳಲಾಗಿದೆ.

18. ಶಿಕ್ಷಣವು ಸಮಕಾಲೀನ ಪಟ್ಟಿಯಲ್ಲಿದೆ, ರಾಜ್ಯ ಮತ್ತು ಯುಟಿ ಸರ್ಕಾರವು ಈ ವಿಷಯದ ಬಗ್ಗೆ ಪೂರ್ವಭಾವಿ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

19. ಹಲವಾರು ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ತಮ್ಮ ವ್ಯಾಪ್ತಿಯಲ್ಲಿರುವ ಖಾಸಗಿ ಕೋಚಿಂಗ್ ಮತ್ತು ಟ್ಯೂಷನ್ ತರಗತಿಗಳನ್ನು ನಿಯಂತ್ರಿಸಲು ಸೂಕ್ತ ಕಾನೂನು ಚೌಕಟ್ಟಿನ ಮೂಲಕ ಉಪಕ್ರಮಗಳನ್ನು ಕೈಗೊಂಡಿವೆ, ಅವುಗಳೆಂದರೆ, ಬಿಹಾರ ಕೋಚಿಂಗ್ ಇನ್‌ಸ್ಟಿಟ್ಯೂಟ್ (ಹತೋಟಿ ಮತ್ತು ನಿಯಂತ್ರಣ) ಕಾಯಿದೆ, 2010 [ಬಿಹಾರ ಕಾಯಿದೆ 17, 2010], ಗೋವಾ ಕೋಚಿಂಗ್ ತರಗತಿಗಳು (ನಿಯಂತ್ರಣ) ಕಾಯಿದೆ, 2001 (2001 ರ ಗೋವಾ ಕಾಯಿದೆ 27), ಉತ್ತರ ಪ್ರದೇಶ್ ರೆಗ್ಯುಲೇಷನ್ ಆಫ್ ಕೋಚಿಂಗ್ ಆಕ್ಟ್, 2002 [ಯುಪಿ ಕಾಯಿದೆ ನಂ. 5 ರ 2002], ಕರ್ನಾಟಕ ಟ್ಯುಟೋರಿಯಲ್ ಸಂಸ್ಥೆಗಳು (ನೋಂದಣಿ ಮತ್ತು ನಿಯಂತ್ರಣ) ನಿಯಮಗಳು, 2001 (ಸೆಕ್ಷನ್ 145 ರ ಉಪ-ವಿಭಾಗ (1) ರ ಮೂಲಕ ನೀಡಲಾದ ಅಧಿಕಾರಗಳ ಹಕ್ಕು ಚಲಾಯಿಸಲು ರಚಿಸಲಾಗಿದೆ], ಕರ್ನಾಟಕ ಶಿಕ್ಷಣ ಕಾಯಿದೆ, 1983 (1995 ರ ಕರ್ನಾಟಕ ಅಧಿನಿಯಮ1), ಮಣಿಪುರ ಕೋಚಿಂಗ್ ಇನ್‌ಸ್ಟಿಟ್ಯೂಟ್ (ಹತೋಟಿ ಮತ್ತು ನಿಯಂತ್ರಣ) ಕಾಯಿದೆ, 2017 (2017 ರ ಕಾಯಿದೆ ಸಂಖ್ಯೆ 8) ಇತ್ಯಾದಿ. ರಾಜಸ್ಥಾನ ಕೋಚಿಂಗ್ ಇನ್‌ಸ್ಟಿಟ್ಯೂಟ್‌ಗಳ (ಹತೋಟಿ ಮತ್ತು ನಿಯಂತ್ರಣ) ಮಸೂದೆ, 2023 ಸಹ ಸಾರ್ವಜನಿಕ ಕ್ಷೇತ್ರದಲ್ಲಿದೆ ಮತ್ತು ಇತ್ತೀಚೆಗೆ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಸುಧಾರಿಸಲು ಮತ್ತು ಒತ್ತಡವನ್ನು ಕಡಿಮೆ ಮಾಡಲು, ಕೋಚಿಂಗ್‌ಗೆ ಸೇರಿಕೊಳ್ಳುವುದನ್ನು ತಡೆಯಲು 27.09.2023 ರಂದು ರಾಜಸ್ಥಾನ ಸರ್ಕಾರವು ಮಾರ್ಗಸೂಚಿಗಳನ್ನು ಹೊರಡಿಸಿದೆ.

20. ಖಾಸಗಿ ಕೋಚಿಂಗ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಮಹತ್ವದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯಾದರೂ, ಅನಿಯಂತ್ರಿತ ಖಾಸಗಿ ಕೋಚಿಂಗ್ ಸೆಂಟರ್‌ಗಳ ಸಂಖ್ಯೆಯು ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ಕಾನೂನು ಚೌಕಟ್ಟಿನ ಒಳಗೆ ಸೂಕ್ತ ರೀತಿಯಲ್ಲಿ ಅನುಷ್ಠಾನಕ್ಕೆ ಅಳವಡಿಸಿಕೊಳ್ಳ ಬಹುದಾದ ಮಾದರಿ ಮಾರ್ಗಸೂಚಿಗಳು / ನೀತಿಯನ್ನು ರೂಪಿಸುವ ಅವಶ್ಯಕತೆ ಇದೆ.

21. ಕೇಂದ್ರ ಸರ್ಕಾರವು ಖಾಸಗಿ ಕೋಚಿಂಗ್ ಸೆಂಟರ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ಮತ್ತು ಸೂಕ್ತ ಕಾನೂನು ಚೌಕಟ್ಟಿನ ಮೂಲಕ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಿಂದ ಅಳವಡಿಸಿಕೊಳ್ಳಲು ಮಾದರಿ ಮಾರ್ಗಸೂಚಿಗಳು / ನೀತಿಯನ್ನು ಪರಿಹರಿಸಲು ಉದ್ದೇಶಿಸಿದೆ.

**1. ಶೀರ್ಷಿಕೆ**

ಕೋಚಿಂಗ್ ಸೆಂಟರ್ 2024 ರ ನೋಂದಣಿ ಮತ್ತು ನಿಯಂತ್ರಣಕ್ಕಾಗಿ ಮಾರ್ಗಸೂಚಿಗಳು.

**2. ಮಾರ್ಗಸೂಚಿಗಳ ಅವಶ್ಯಕತೆ**

ವಿದ್ಯಾರ್ಥಿಗಳಿಗೆ ಯಾವುದೇ ಅಧ್ಯಯನ ಕಾರ್ಯಕ್ರಮ, ಸ್ಪರ್ಧಾತ್ಮಕ ಪರೀಕ್ಷೆಗಳು ಅಥವಾ ಶೈಕ್ಷಣಿಕ ಬೆಂಬಲಕ್ಕಾಗಿ ಉತ್ತಮ ಮಾರ್ಗದರ್ಶನ ಮತ್ತು ಸಹಾಯಕ್ಕಾಗಿ, ಕೋಚಿಂಗ್ ಸೆಂಟರ್‌ನ ನಿಯಂತ್ರಣಕ್ಕಾಗಿ ಮಾರ್ಗಸೂಚಿಗಳನ್ನು ಒದಗಿಸುವುದು.

**3. ಮಾರ್ಗಸೂಚಿಗಳ ಆವಶ್ಯಕತೆ**

(i) ಕೋಚಿಂಗ್ ಸೆಂಟರ್‌ಗಳ ನೋಂದಣಿ ಮತ್ತು ನಿಯಂತ್ರಣಕ್ಕಾಗಿ ಚೌಕಟ್ಟನ್ನು ಒದಗಿಸುವುದು.

(ii) ತರಬೇತಿ ಕೇಂದ್ರವನ್ನು ನಡೆಸಲು ಬೇಕಾದ ಕನಿಷ್ಠ ಪ್ರಮಾಣದ ಅವಶ್ಯಕತೆಗಳನ್ನು ಸೂಚಿಸುವುದು.

(iii) ಕೋಚಿಂಗ್ ಸೆಂಟರ್‌ಗೆ ದಾಖಲಾದ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವುದು.

(iv) ಸಹ-ಪಠ್ಯ ಚಟುವಟಿಕೆಗಳ ಮೇಲೆ ಮತ್ತು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯ ಕಡೆ ಗಮನ ಕೊಡುವಂತೆ ಕೋಚಿಂಗ್ ಸೆಂಟರ್‌ಗಳಿಗೆ ಸಲಹೆ ನೀಡುವುದು.

(v) ವಿದ್ಯಾರ್ಥಿಗಳ ವೃತ್ತಿ ಸಲಹೆ ಮತ್ತು ಮಾನಸಿಕ ಯೋಗಕ್ಷೇಮಕ್ಕಾಗಿ ಮಾನಸಿಕ ಸಮಾಲೋಚನೆಗಳನ್ನು ಒದಗಿಸುವುದು.

**4. ವ್ಯಾಖ್ಯಾನ**

(i) 'ಅಪೀಲು ಪ್ರಾಧಿಕಾರ' (ಮೇಲರ್ಜಿ ಸ್ವೀಕರಿಸುವ ಪ್ರಾಧಿಕಾರ) ಎಂದರೆ ಸೂಕ್ತ ಸರ್ಕಾರದಿಂದ ಸೂಚಿಸಲಾದ ಅಧಿಕಾರಿ;

(ii) 'ಕೋಟಿಂಗ್' ಎಂದರೆ **50 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ** ಕಲಿಸುವ ಯಾವುದೇ ಕಲಿಕೆಯ ಶಾಖೆಯಲ್ಲಿ ಬೋಧನೆ, ಸೂಚನೆಗಳು ಅಥವಾ ಸಲಹೆಗಳು ಆದರೆ ಸಮಾಲೋಚನೆ ಕ್ರೀಡೆ, ನೃತ್ಯ, ರಂಗಭೂಮಿ ಮತ್ತು ಇತರ ಸೃಜನಶೀಲ ಚಟುವಟಿಕೆಗಳನ್ನು ಒಳಗೊಂಡಿರುವುದಿಲ್ಲ;

(iii) 'ಕೋಟಿಂಗ್ ಸೆಂಟರ್' ನ್ನು ಯಾವುದೇ ಅಧ್ಯಯನ ಕಾರ್ಯಕ್ರಮ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ಅಥವಾ **50 ಕ್ಕೂ ಹೆಚ್ಚು ವಿದ್ಯಾರ್ಥಿಗಳ** ಶಾಲೆ, ಕಾಲೇಜು ಮತ್ತು

ವಿಶ್ವವಿದ್ಯಾನಿಲಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವನ್ನು ಒದಗಿಸಲು ಯಾವುದೇ ವ್ಯಕ್ತಿಯಿಂದ ಸ್ಥಾಪಿಸಲ್ಪಟ್ಟ ನಡೆಸುವ ಅಥವಾ ನಿರ್ವಹಿಸುವ ಕೇಂದ್ರವನ್ನು ಒಳಗೊಂಡಿದೆ.

(iv) 'ಅಧಿಕೃತ ಸಂಸ್ಥೆ' ಎಂದರೆ ಸೂಕ್ತ ಸರ್ಕಾರದಿಂದ ಸೂಚಿಸಲಾದ ಅಧಿಕಾರಿ;

(v) 'ಸರ್ಕಾರ' ಎಂದರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ / ಕೇಂದ್ರಾಡಳಿತ ಸರ್ಕಾರ ಸೂಕ್ತ ಕಾನೂನು ವ್ಯಾಪ್ತಿಯನ್ನು ಹೊಂದಿರುವಂಥದು.;

(vi) 'ಶಿಕ್ಷಣಸಂಸ್ಥೆ' ಎಂದರೆ ಶಾಲೆ ಅಥವಾ ಯಾವುದೇ ಇತರ ಶಿಕ್ಷಣ ಸಂಸ್ಥೆ ಮಾನ್ಯತೆ ಪಡೆದ ಅಥವಾ ನಿಯಂತ್ರಿಸಲ್ಪಟ್ಟಿರುವ, ಅಥವಾ ಒಂದು ಮಂಡಳಿಗೆ ಸಂಯೋಜಿತವಾದ, ಅಥವಾ ರಾಜ್ಯ / ಕೇಂದ್ರಾಡಳಿತ ಸರ್ಕಾರದಿಂದ ನಿಯಂತ್ರಿಸಲ್ಪಟ್ಟ ಅಥವಾ ಗುರುತಿಸಲ್ಪಟ್ಟಿರುವ ಒಂದು ಸಂಸ್ಥೆ ಕಾಲೇಜು ಮತ್ತು ಅಂಗ ಸಂಸ್ಥೆ, ವಿಶ್ವವಿದ್ಯಾನಿಲಯ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ / ಕೇಂದ್ರಾಡಳಿತ ಸರ್ಕಾರದ ಕಾಯಿದೆ ಅಡಿಯಲ್ಲಿ ಸ್ಥಾಪಿಸಲಾದ ಶೈಕ್ಷಣಿಕ ಸಂಸ್ಥೆ;

(vii) 'ವ್ಯಕ್ತಿ' ಎಂದರೆ ಒಬ್ಬ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪು ಅಥವಾ ಕಾರ್ಪೊರೇಟ್ ಸಂಸ್ಥೆ, ಅಥವಾ ಟ್ರಸ್ಟ್, ಸಂಸ್ಥೆ ಅಥವಾ ಸಮಾಜ ಅಥವಾ ಸಂಸ್ಥೆಯನ್ನು ಒಳಗೊಂಡಿರುತ್ತದೆ;

(viii) 'ಮಾಲೀಕ' ಎಂದರೆ ನೋಂದಾಯಿಸಲು ಬಯಸುವ ಅಥವಾ ನೋಂದಾಯಿತ ತರಬೇತಿ ಕೇಂದ್ರದ ಮಾಲೀಕರು ಮತ್ತು ಜಂಟಿ ಮಾಲೀಕರು;

(ix) 'ಬೋಧಕ' ಎಂದರೆ ಯಾವುದೇ ಕೋಚಿಂಗ್ ಸೆಂಟರ್‌ನಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಅಥವಾ ತರಬೇತಿ ನೀಡುವ ವ್ಯಕ್ತಿ ಮತ್ತು ವಿಶೇಷ ಬೋಧನೆಗಳನ್ನು ನೀಡುವ ಬೋಧಕರು.

(x) 'ವಿಶ್ವವಿದ್ಯಾನಿಲಯ' ಎಂದರೆ ಕೇಂದ್ರ ಕಾಯಿದೆ, ಪ್ರಾಂತೀಯ ಕಾಯಿದೆ ಅಥವಾ ರಾಜ್ಯ ಕಾಯಿದೆಯಡಿ ಸ್ಥಾಪಿತವಾದ ವಿಶ್ವವಿದ್ಯಾನಿಲಯ, ಮತ್ತು ಸಂಬಂಧಪಟ್ಟ ವಿಶ್ವವಿದ್ಯಾನಿಲಯದೊಂದಿಗೆ ಸಮಾಲೋಚಿಸಿ, ಮಾಡಲಾದ ನಿಯಮಗಳಿಗೆ ಅನುಸಾರವಾಗಿ UGC ಯಿಂದ ಗುರುತಿಸಬಹುದಾದಂತಹ, UGC ಕಾಯಿದೆ ಅಡಿಯ ನಿಯಮಾವಳಿಗಳ ಪ್ರಕಾರ ರಚಿತವಾದ ಸಂಸ್ಥೆ.

**5. ಕೋಚಿಂಗ್ ಸೆಂಟರ್ ನ ನೋಂದಣಿ**

(i) ಒಬ್ಬ ವ್ಯಕ್ತಿಯು ನಿಯಮಾವಳಿಗಳ, ಮಾರ್ಗಸೂಚಿಗಳ ಪ್ರಕಾರ ರಚಿತವಾದ, ನೋಂದಾಯಿತವಾದ ಕೋಚಿಂಗ್ ಸೆಂಟರ್‌ನಲ್ಲಿ ಮಾತ್ರ ಒಬ್ಬನು ಪಾಠ ಹೇಳಬಹುದು, ನಡೆಸಬಹುದು.

(ii) ಮಾರ್ಗಸೂಚಿಗಳ ಅನುಷ್ಠಾನದ ದಿನಾಂಕಕ್ಕೆ ಮೊದಲೇ ಅಸ್ತಿತ್ವದಲ್ಲಿರುವ ಕೋಚಿಂಗ್ ಸೆಂಟರು, ಮಾರ್ಗಸೂಚಿಗಳ ಅನುಷ್ಠಾನದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ನೋಂದಣಿಗಾಗಿ ಅರ್ಜಿ ಸಲ್ಲಿಸಬೇಕು.

(iii) ಕೋಚಿಂಗ್ ಸೆಂಟರ್‌ನ ನೋಂದಣಿಗಾಗಿ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು, ಅಂತಹ ಕೋಚಿಂಗ್ ಸೆಂಟರ್ ಸ್ಥಳೀಯ ಅಧಿಕಾರ ವ್ಯಾಪ್ತಿಗೊಳಪಟ್ಟು, ಸರ್ಕಾರವು ನಿಗದಿಗೊಳಿಸಬಹುದಾದಂತಹ ಶುಲ್ಕಗಳು ಮತ್ತು ದಾಖಲೆಗಳನ್ನು ನೀಡಬೇಕು.

(iv) ಕೋಚಿಂಗ್ ಸೆಂಟರ್ ಅನೇಕ ಶಾಖೆಗಳನ್ನು ಹೊಂದಿದ್ದ ಸಂದರ್ಭದಲ್ಲಿ, ಅಂತಹ ಪ್ರತಿಯೊಂದು ಶಾಖೆಯನ್ನೂ ಪ್ರತ್ಯೇಕ ಕೋಚಿಂಗ್ ಸೆಂಟರ್ ಎಂದು ಪರಿಗಣಿಸಲಾಗುತ್ತದೆ ಮತ್ತು ಪ್ರತಿ ಶಾಖೆಯ ನೋಂದಣಿಗಾಗಿ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕು.

(v) ಸಕ್ಷಮ ಪ್ರಾಧಿಕಾರವು, ಕೋಚಿಂಗ್ ಸೆಂಟರ್ ನೋಂದಣಿಗಾಗಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ, ನಿಗದಿತ ನಮೂನೆಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ನೀಡಬೇಕು ಅಥವಾ ಅಂತಹ ನೋಂದಣಿಯನ್ನು ನೀಡಲು ನಿರಾಕರಿಸುವ ಆದೇಶವನ್ನು ಸಕಾರಣವಾಗಿ ಅರ್ಜಿದಾರರಿಗೆ ತಿಳಿಸಬೇಕು.

ಆದಾಗ್ಯೂ, ಸಂಬಂಧಪಟ್ಟ ವ್ಯಕ್ತಿಗೆ ಸಮಂಜಸವಾದ ಸುನಾವಣೆಯ ಅವಕಾಶವನ್ನು ನೀಡದೆ ನೋಂದಣಿಯನ್ನು ನಿರಾಕರಿಸುವಂತಿಲ್ಲ.

(vi) ಯಾವುದೇ ಕಾರಣಕ್ಕಾಗಿ ಮುಂಚಿತವಾಗಿ ರದ್ದುಗೊಳಿಸಿದೆ ಇದ್ದಾಗ, ನೋಂದಣಿ ಪ್ರಮಾಣಪತ್ರದ ಮಾನ್ಯತೆಯ ಅವಧಿಯನ್ನು ಸರ್ಕಾರವು ನಿರ್ಧರಿಸುತ್ತದೆ.

(vii) ಸೂಕ್ತ ಸರ್ಕಾರವು ನಿಗದಿಪಡಿಸಬಹುದಾದಂತಹ ಶುಲ್ಕಗಳು ಮತ್ತು ದಾಖಲೆಗಳೊಂದಿಗೆ ಅಂತಹ ನಮೂನೆಯಲ್ಲಿ, ಪ್ರತಿಯೊಂದು ನೋಂದಾಯಿತ ಕೋಚಿಂಗ್ ಸೆಂಟರೂ ನೋಂದಣಿಯ ಅವಧಿ ಮುಗಿಯುವ ದಿನಾಂಕಕ್ಕೆ ಎರಡು ತಿಂಗಳ ಮೊದಲು ಸಕ್ಷಮ ಪ್ರಾಧಿಕಾರಕ್ಕೆ ನೋಂದಣಿ ಪ್ರಮಾಣಪತ್ರವನ್ನು ನವೀಕರಿಸಲು ಅರ್ಜಿ ಸಲ್ಲಿಸಬೇಕು.

(viii) ಸಕ್ಷಮ ಪ್ರಾಧಿಕಾರವು, ನಿಗದಿತ ನಮೂನೆಯಲ್ಲಿ ನೋಂದಣಿ ನವೀಕರಣಕ್ಕಾಗಿ ಅರ್ಜಿಯನ್ನು ಸ್ವೀಕರಿಸಿದ ನಂತರ ಮತ್ತು ನಿಗದಿತ ಶುಲ್ಕವನ್ನು ಪಾವತಿಸಿದ ನಂತರ, ನೋಂದಣಿ ಅವಧಿಯ ಮುಕ್ತಾಯದ ಮೊದಲು ನೋಂದಣಿ ಸಂಖ್ಯೆಯ ನವೀಕರಣದ ಅರ್ಜಿಯ ಬಗ್ಗೆ ನಿರ್ಧರಿಸಬಹುದು ಮತ್ತು ಪ್ರಮಾಣಪತ್ರವನ್ನು ನವೀಕರಿಸಬಹುದು ಅಥವಾ ನವೀಕರಣವನ್ನು ಮಾಡಲಾಗದಿದ್ದರೆ ಲಿಖಿತವಾಗಿ

ನಿರಾಕರಣೆಗೆ ಕಾರಣಗಳನ್ನು ದಾಖಲಿಸಿದ ನಂತರ, ನೋಂದಣಿ ಅವಧಿ ಮುಗಿಯುವ ಮೊದಲು ಅರ್ಜಿದಾರರಿಗೆ ತಿಳಿಸಬೇಕು.

ಆದಾಗ್ಯೂ, ಸಂಬಂಧಪಟ್ಟ ವ್ಯಕ್ತಿಗೆ ಸಮಂಜಸವಾದ ಸುನಾವಣೆಯ ಅವಕಾಶವನ್ನು ನೀಡಬೇಕು, ಹಾಗೆ ಮಾಡದೆ ನೋಂದಣಿಯನ್ನು ನಿರಾಕರಿಸುವ ಯಾವುದೇ ಆದೇಶವನ್ನು ರವಾನಿಸತಕ್ಕದ್ದಲ್ಲ.

(ix) ಕನಿಷ್ಠ ಮಾನವ ಸಂಪರ್ಕ ಏರ್ಪಡಿಸುವ ಮೂಲಕ ವೈಶಿಷ್ಟ್ಯವಿಲ್ಲದ ರೀತಿಯಲ್ಲಿ ಕೋಚಿಂಗ್ ಸೆಂಟರ್‌ನ ನೋಂದಣಿಯನ್ನು ಸುಗಮಗೊಳಿಸಲು ಸರ್ಕಾರವು ವೆಬ್-ಪೋರ್ಟಲ್/ಆನ್‌ಲೈನ್ ಕಾರ್ಯವಿಧಾನವನ್ನು ರೂಪಿಸಬೇಕು.

**6. ನೋಂದಣಿಗೆ ಷರತ್ತುಗಳು**

(i) ಯಾವುದೇ ಕೋಚಿಂಗ್ ಸೆಂಟರ್ -

(ಎ) ಪದವಿಗಿಂತ ಕಡಿಮೆ ಅರ್ಹತೆಯನ್ನು ಹೊಂದಿರುವ ಶಿಕ್ಷಕರನ್ನು ನೇಮಿಸಿಕೊಳ್ಳುವಂತಿಲ್ಲ.

(ಬಿ) ಕೋಚಿಂಗ್ ಸೆಂಟರ್‌ಗೆ ವಿದ್ಯಾರ್ಥಿಗಳನ್ನು ಸೆಳೆಯಲು ತಪ್ಪುದಾರಿಗೆಳೆಯುವ ಭರವಸೆಗಳನ್ನು ಅಥವಾ ಗ್ಯಾರೆಂಟಿಗಳನ್ನು ರ್ಯಾಂಕು ಅಥವಾ ಉತ್ತಮ ಅಂಕಗಳ ಖಾತರಿಯನ್ನು ನೀಡುವಂತಿಲ್ಲ.

(ಸಿ) 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಯನ್ನು ಸೇರಿಸಿಕೊಳ್ಳಬಾರದು, ಮಾಧ್ಯಮಿಕ ಶಾಲಾ ಪರೀಕ್ಷೆಯ ನಂತರವೇ ವಿದ್ಯಾರ್ಥಿಯನ್ನು ಸೇರಿಸಿಕೊಳ್ಳಬೇಕು.

(ಡಿ) ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ತರಬೇತಿಯ ಗುಣಮಟ್ಟ ಅಥವಾ ಅದರಲ್ಲಿ ನೀಡಲಾಗುವ ಸೌಲಭ್ಯಗಳು ಅಥವಾ ಅಂತಹ ಕೋಚಿಂಗ್ ಸೆಂಟರಿನ ಬಗ್ಗೆ ಅಥವಾ ಹಾಜರಾದ ವಿದ್ಯಾರ್ಥಿಯಿಂದ ಪಡೆದ ಫಲಿತಾಂಶದ ಯಾವುದೇ ಹಕ್ಕಿಗೆ ಸಂಬಂಧಿಸಿದ ಯಾವುದೇ ತಪ್ಪುದಾರಿಗೆಳೆಯುವ ಜಾಹೀರಾತನ್ನು ಪ್ರಕಟಿಸಬಾರದು.

(ಇ) ಪ್ರತಿ ವಿದ್ಯಾರ್ಥಿಗೆ ಕನಿಷ್ಠ ಸ್ಥಳಾವಕಾವು ಅಗತ್ಯಕ್ಕಿಂತ ಕಡಿಮೆಯಿದ್ದರೆ ನೋಂದಾಯಿಸಿಕೊಳ್ಳಬಾರದು.

(ಎಫ್) ನೀತಿಭ್ರಷ್ಟನನ್ನಾಗಲಿ ಅಪರಾಧಿಯೆಂದು ನ್ಯಾಯಲಯ ತೀರ್ಮಾನಿಸಿದವನನ್ನಾಗಲಿ ಯಾವುದೇ ಬೋಧಕ ಅಥವಾ ವ್ಯಕ್ತಿಯ ಸೇವೆಗಳನ್ನು ನೇಮಿಸಿಕೊಳ್ಳಬಾರದು.

(ಜಿ) ಮಾರ್ಗಸೂಚಿಗಳ ಅಗತ್ಯತೆಯ ಪ್ರಕಾರ ಅದು ಕೌನ್ಸೆಲಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದಿದ್ದರೆ ನೋಂದಾಯಿಸಿಕೊಳ್ಳಬಾರದು.

(ii) ಕೋಚಿಂಗ್ ಸೆಂಟರ್ ಬೋಧಕರ ಅರ್ಹತೆ, ಕೋರ್ಸ್‌ಗಳು/ಪಠ್ಯಕ್ರಮ, ಪೂರ್ಣಗೊಳಿಸುವ ಅವಧಿ, ಹಾಸ್ಟೆಲ್ ಸೌಲಭ್ಯಗಳು (ಯಾವುದಾದರೂ ಇದ್ದರೆ) ಮತ್ತು ವಿಧಿಸಲಾಗುವ ಶುಲ್ಕಗಳು, ಸುಲಭ ನಿರ್ಗಮನ ನೀತಿ, ಶುಲ್ಕ ಮರುಪಾವತಿ ಮಾಡುವ ನೀತಿ, ವಿದ್ಯಾರ್ಥಿಗಳ ಸಂಖ್ಯೆಯ ನವೀಕರಣ, ಕೇಂದ್ರದಿಂದ ತರಬೇತಿಯನ್ನು ಕೈಗೊಂಡ ವಿದ್ಯಾರ್ಥಿಗಳ ಸಂಖ್ಯೆ, ಅಂತಿಮವಾಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾದ ವಿವರಗಳೆಲ್ಲ ವೆಬ್‌ಸೈಟಿನಲ್ಲಿ ಪ್ರಕಟವಾಗಿರಬೇಕು.

(iii) ಕೋಚಿಂಗ್ ಸೆಂಟರ್‌ಗಳು ಸ್ಥಳೀಯ ನ್ಯಾಯವ್ಯಾಪ್ತಿಯಲ್ಲಿ ಅನ್ವಯವಾಗುವ ಪ್ರತ್ಯೇಕ ನೋಂದಣಿಯೂ ಸೇರಿದಂತೆ, ವಿವಿಧ ಕಾನೂನುಗಳು, ನಿಯಮಗಳು, ನಿಬಂಧನೆಗಳು ಇತ್ಯಾದಿಗಳಿಗೆ ಬದ್ಧವಾಗಿರಬೇಕು.

**7. ನೋಂದಣಿಗಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:**

(i) ಕೋಚಿಂಗ್ ಸೆಂಟರ್‌ನ ನೋಂದಣಿಗೆ ಪ್ರತಿ ಅರ್ಜಿಯ ಜೊತೆ ಮಾಲೀಕರ ಒಂದು ಮುಚ್ಚಳಿಕೆ ಇರಬೇಕು-

(ಎ) 'ನೋಂದಾಯಿತ ಕೋಚಿಂಗ್ ಸೆಂಟರ್' ಎಂಬ ಪದವನ್ನು ಮಾತ್ರ ಬಳಸಬೇಕು ಮತ್ತು ಯಾವುದೇ ಸೈನ್ ಬೋರ್ಡಿನ ಮೇಲೆ ಅಥವಾ ಯಾವುದೇ ಪ್ರಾಸ್ಪೆಕ್ಟಸ್‌ನಲ್ಲಿ ಅಥವಾ ಪತ್ರವ್ಯವಹಾರದಲ್ಲಿ ಅಥವಾ 'ಅಂಗೀಕರಿಸಲ್ಪಟ್ಟ' ಅಥವಾ 'ಅನುಮೋದಿತ' (ಮನ್ನಣೆ ಪಡೆದ) ಎಂಬ ಪದಗಳನ್ನು ಬಳಸಬಾರದು;

(ಬಿ) ಸಂಸ್ಥೆಗಳಲ್ಲಿ / ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೋಚಿಂಗ್ ತರಗತಿಗಳನ್ನು ಶಾಲಾವೇಳೆಯಲ್ಲಿ ನಡೆಸಬಾರದು.

(ಸಿ) ಕೋಚಿಂಗ್ ಕ್ಲಾಸ್‌ಗೆ ಸಂಬಂಧಿಸಿದಂತೆ ಶಿಕ್ಷಕರ ವಿದ್ಯಾರ್ಹತೆ, ಕೋಚಿಂಗ್ ಕ್ಲಾಸ್‌ನ ಟೈಮ್‌ಟೇಬಲ್ (ವೇಳಾಪಟ್ಟಿ), ಶುಲ್ಕ ಮತ್ತು ಸಾಮಾನ್ಯ ಮಾಹಿತಿಯನ್ನು, ತರಬೇತಿ ಕೇಂದ್ರದ ವೆಬ್‌ಸೈಟ್‌ನಲ್ಲಿ ಮತ್ತು ಸೂಚನಾ ಫಲಕದಲ್ಲಿ ಆವರಣದಲ್ಲಿನ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸಿರಬೇಕು;

(ಡಿ) ಅವನು/ಅವಳು ಅಥವಾ ಯಾವುದೇ ಶಿಕ್ಷಕರು ಅಥವಾ ಉದ್ಯೋಗದಲ್ಲಿರುವ ಯಾವುದೇ ವ್ಯಕ್ತಿ ಅಥವಾ ತರಬೇತಿ ಕೇಂದ್ರದಲ್ಲಿ ಯಾವುದೇ ರೀತಿಯಲ್ಲಿ ನೀತಿ ಭ್ರಷ್ಟತೆಯ ಯಾವುದೇ ಅಪರಾಧಕ್ಕಾಗಿ ಶಿಕ್ಷೆಗೊಳಗಾಗಿಲ್ಲವೆಂಬ ಮುಚ್ಚಳಿಕೆಯನ್ನು ಕೊಡಬೇಕು ಮತ್ತು ಶಿಕ್ಷಕನ ಯಾವುದೇ ಬದಲಾವಣೆಯನ್ನು ತಕ್ಷಣವೇ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಬೇಕು;

(ಇ) ಅವನು / ಅವಳು ಕೋಚಿಂಗ್ ತರಗತಿಗೆ ಪ್ರವೇಶಿಸಲು ವಿದ್ಯಾರ್ಥಿಗಳ ನಿರ್ದಿಷ್ಟ ಸಂಖ್ಯೆಯ ಬಗೆಗಿನ ಷರತ್ತುಗಳಿಗೆ ಬದ್ಧರು;

(ಎಫ್) ಅವನು / ಅವಳು ಈ ಮಾರ್ಗಸೂಚಿಗಳ ಇತರ ನಿಯಮಗಳು ಮತ್ತು ಷರತ್ತುಗಳಿಗೆ ಬದ್ಧರು;

(ii) ನೋಂದಣಿಯ ನವೀಕರಣಕ್ಕಾಗಿ ಅರ್ಜಿಯು ಚಾರ್ಟರ್ಡ್ ಅಕೌಂಟೆಂಟ್‌ನಿಂದ ಲೆಕ್ಕಪರಿಶೋಧನೆ ಮಾಡಿದ ತಃಖ್ತೆಯೊಂದಿಗೆ ಇರುಬೇಕು.

**8. ಶುಲ್ಕ**

(i) ವಿವಿಧ ಕೋರ್ಸ್‌ಗಳಿಗೆ/ಪಠ್ಯಕ್ರಮಗಳಿಗೆ ಬೋಧನಾ ಶುಲ್ಕಗಳು ನ್ಯಾಯಯುತವಾಗಿರಬೇಕು ಮತ್ತು ಸಮಂಜಸವಾಗಿರಬೇಕು, ವಿಧಿಸಲಾದ ಶುಲ್ಕಕ್ಕೆ ರಸೀದಿಗಳನ್ನು ನೀಡಬೇಕು.

(ii) ಕೋಚಿಂಗ್ ಸೆಂಟರ್ ವಿವಿಧ ಕೋರ್ಸ್‌ಗಳು/ಪಠ್ಯಕ್ರಮ, ಅವುಗಳ ಮುಕ್ತಾಯದ ಅವಧಿ, ತರಗತಿಗಳ ಸಂಖ್ಯೆ, ಉಪನ್ಯಾಸಗಳು, ಟ್ಯುಟೋರಿಯಲ್‌ಗಳು, ಹಾಸ್ಟೆಲ್ ಸೌಲಭ್ಯಗಳು (ಯಾವುದಾದರೂ ಇದ್ದರೆ) ಮತ್ತು ವಿಧಿಸಲಾಗುವ ಶುಲ್ಕಗಳು, ಸುಲಭ ನಿರ್ಗಮನ ನೀತಿ, ಶುಲ್ಕ ಮರುಪಾವತಿ ಇತ್ಯಾದಿಗಳನ್ನು ನಮೂದಿಸಿರುವ ಪ್ರಾಸ್ಪೆಕ್ಟಸ್(ವಿವರಣ ಪುಸ್ತಿಕೆ) ಯನ್ನು ನೀಡಬೇಕು. ಈ ವಿವರಗಳು ಕಟ್ಟಡದ ಆವರಣದಲ್ಲಿ ಪ್ರಮುಖವಾದ ಮತ್ತು ಸುಲಭವಾಗಿ ದೊರಕುವ ಸ್ಥಳದಲ್ಲಿ ಇರಬೇಕು.

(iii) ಪ್ರಾಸ್ಪೆಕ್ಟಸ್, (ವಿವರಣ ಪುಸ್ತಿಕೆ) ನೋಟ್ಸ್ ಮತ್ತು ಇತರ ಸಾಮಗ್ರಿಗಳನ್ನು ಕೋಚಿಂಗ್ ಸೆಂಟರ್‌ಗೆ ದಾಖಲಾದ ವಿದ್ಯಾರ್ಥಿಗಳಿಗೆ ಯಾವುದೇ ಪ್ರತ್ಯೇಕ ಶುಲ್ಕವಿಲ್ಲದೆ ಸರಬರಾಜು ಮಾಡಬೇಕು.

(iv) ವಿದ್ಯಾರ್ಥಿಯು ಕೋರ್ಸ್‌ಗೆ ನಿಗದಿತ ಶುಲ್ಕವನ್ನು ಪೂರ್ಣವಾಗಿ ಪಾವತಿಸಿದ್ದರೆ ಮತ್ತು ನಿಗದಿತ ಅವಧಿಯ ಮಧ್ಯದಲ್ಲಿ ಕೋರ್ಸ್‌ಅನ್ನು ತೊರೆಯುತ್ತಿದ್ದರೆ, ವಿದ್ಯಾರ್ಥಿಯು ಉಳಿದ ಅವಧಿಗೆ ಮೊದಲು ಠೇವಣಿ ಮಾಡಿದ ಶುಲ್ಕದಿಂದ 10 ದಿನಗಳ ಒಳಗೆ ದಾಮಾಷಾ ಪ್ರಕಾರ ಹಣವನ್ನು ವಾಪಸ್ಸು ಮಾಡಬೇಕು. ವಿದ್ಯಾರ್ಥಿಯು ಕೋಚಿಂಗ್ ಸೆಂಟರ್‌ನ ಹಾಸ್ಟೆಲ್‌ನಲ್ಲಿ ವಾಸವಾಗಿದ್ದರೆ, ಹಾಸ್ಟೆಲ್ ಶುಲ್ಕ ಮತ್ತು ಮೆಸ್ ಶುಲ್ಕ ಇತ್ಯಾದಿಗಳನ್ನೂ ಸಹ ಮರುಪಾವತಿಸಬೇಕು.

(v) ಯಾವುದೇ ಸಂದರ್ಭಗಳಲ್ಲೂ, ಒಂದು ನಿರ್ದಿಷ್ಟ ಕೋರ್ಸ್ ಮತ್ತು ಅವಧಿಗೆ ಸೇರಿಸಿಕೊಂಡ ದಾಖಲಾತಿಯನ್ನು ಆಧಾರದ ಮೇಲೆ ಶುಲ್ಕವನ್ನು ಕೋರ್ಸ್‌ನ ಚಾಲ್ತಿಯ ಸಮಯದಲ್ಲಿ ಹೆಚ್ಚಿಸಬಾರದು.

**9. ಮೂಲಸೌಕರ್ಯ ಅಗತ್ಯತೆಗಳು**

(i) ಕೋಚಿಂಗ್ ಸೆಂಟರ್‌ನ ಮೂಲ ರಚನೆಯೊಳಗೆ, ತರಗತಿ/ಬ್ಯಾಚ್‌ನಲ್ಲಿ ಪ್ರತಿ ವಿದ್ಯಾರ್ಥಿಗೆ ಕನಿಷ್ಠ ಒಂದು ಚದರ ಮೀಟರ್ ಪ್ರದೇಶವನ್ನು ನಿಗದಿಪಡಿಸಬಹುದು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸಾಕಷ್ಟು ಮೂಲಸೌಕರ್ಯಗಳಿರಬೇಕು.

(ii) ಕೋಚಿಂಗ್ ಸೆಂಟರ್ ಕಟ್ಟಡವು ಅಗ್ನಿ ಸುರಕ್ಷತಾ ನಿಯಮಾವಳಿಗಳು, ಕಟ್ಟಡ ಸುರಕ್ಷತೆ ನಿಯಮಾವಳಿಗಳು ಮತ್ತು ಇತರ ಮಾನದಂಡಗಳಿಗೆ ಬದ್ಧವಾಗಿರಬೇಕು, ಮತ್ತು ಸೂಕ್ತ ಸರ್ಕಾರವು

ನಿರ್ಧರಿಸಿದಂತೆ ಸೂಕ್ತ ಅಧಿಕಾರಿಗಳಿಂದ ಅಗ್ನಿಶಾಮಕ ಮತ್ತು ಕಟ್ಟಡ ಸುರಕ್ಷತೆ ಪ್ರಮಾಣಪತ್ರವನ್ನು ಪಡೆಯಬೇಕು.

(iii) ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಕೋಚಿಂಗ್ ಸೆಂಟರಿನಲ್ಲಿ ಪ್ರಥಮ ಚಿಕಿತ್ಸಾ ಕಿಟ್, ಚಿಕಿತ್ಸಾ ಸೌಲಭ್ಯ ಇರಲೇಬೇಕು. ತುರ್ತುಸ್ಥಿತಿಗಾಗಿ ಆಸ್ಪತ್ರೆಗಳು, ವೈದ್ಯರು ಮುಂತಾದ ವೃತ್ತಿಪರ ಸೇವೆಗಳ ಪಟ್ಟಿ, ಸೇವೆಗಳು, ಪೊಲೀಸ್ ಸಹಾಯವಾಣಿ ವಿವರಗಳು, ಅಗ್ನಿಶಾಮಕ ಸೇವಾ ಸಹಾಯವಾಣಿ, ಮಹಿಳಾ ಸಹಾಯವಾಣಿ ಇತ್ಯಾದಿಗಳನ್ನು ಪ್ರದರ್ಶಿಸಬೇಕು ಮತ್ತು ಅವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಬೇಕು.

(iv) ಕೋಚಿಂಗ್ ಸೆಂಟರ್ ಕಟ್ಟಡವನ್ನು ಸಂಪೂರ್ಣವಾಗಿ ವಿದ್ಯುದೀಕರಿಸಬೇಕು, ಚೆನ್ನಾಗಿ ಗಾಳಿ ಮತ್ತು ಕಟ್ಟಡದ ಪ್ರತಿ ತರಗತಿಯಲ್ಲೂ ಸಾಕಷ್ಟು ಬೆಳಕಿನ ವ್ಯವಸ್ಥೆಗಳನ್ನು ಮಾಡಬೇಕು.

(v) ಕೇಂದ್ರದ ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಸುರಕ್ಷಿತ ಕುಡಿಯುವ ನೀರು ಲಭ್ಯವಿರಬೇಕು.

(vi) ಕೋಚಿಂಗ್ ಸೆಂಟರ್‌ಗೆ ಅಗತ್ಯವಿರುವಲ್ಲೆಲ್ಲಾ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು ಮತ್ತು ಉತ್ತಮ ಭದ್ರತಾ ವ್ಯವಸ್ಥೆಯಿರಬೇಕು.

(vii) ವಿದ್ಯಾರ್ಥಿಗಳು ದೂರು ನೀಡಲು ಕೋಚಿಂಗ್ ಸೆಂಟರ್‌ನಲ್ಲಿ ದೂರು ಪೆಟ್ಟಿಗೆ ಅಥವಾ ರಿಜಿಸ್ಟರನ್ನು ಇರಿಸಬಹುದು. ಕೋಚಿಂಗ್ ಸೆಂಟರಿನ ವಿದ್ಯಾರ್ಥಿಗಳ ದೂರುಗಳು / ಕುಂದುಕೊರತೆಗಳ ಪರಿಹಾರಕ್ಕಾಗಿ ಸಮಿತಿಯೊಂದು ಇರತಕ್ಕದ್ದು.

(viii) ಕೋಚಿಂಗ್ ಸೆಂಟರ್ ಕಟ್ಟಡದ ಆವರಣದಲ್ಲಿ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು.

**10. ಪಠ್ಯಕ್ರಮ**

**10.1 ತರಗತಿಗಳು**

(i) ಕೋಚಿಂಗ್ ಸೆಂಟರಿನ ಪ್ರಾಸ್ಪೆಕ್ಟಸ್‌ನಲ್ಲಿ ನಿಗದಿಪಡಿಸಿರುವಂತೆ ನಿಗದಿತ ಸಮಯದಲ್ಲಿ ತರಗತಿಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತಕ್ಕದ್ದು.

(ii) ಸಂಸ್ಥೆಗಳು / ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ತರಬೇತಿ ತರಗತಿಗಳನ್ನು ಅವರ ಸಂಸ್ಥೆಗಳು / ಶಾಲೆಗಳ ಸಮಯದಲ್ಲಿ ನಡೆಸಬಾರದು, ಆಗ ಸಂಸ್ಥೆಗಳು / ಶಾಲೆಗಳಲ್ಲಿ ಅವರ ನಿಯಮಿತ ಹಾಜರಾತಿಗೆ ಅಡ್ಡಿಯಾಗದು ಮತ್ತು ನಿಯತವಾಗಿ ಹಾಜರಾತಿ ಬೇಕಿಲ್ಲದ ಡಮ್ಮಿ ಶಾಲೆಗಳಿಗೂ ಅಡ್ಡಿಯಾಗದು.

(iii) ತಮ್ಮ ಶಿಕ್ಷಣದಲ್ಲಿ ಹೆಚ್ಚಿನ ಬೆಂಬಲದ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಪರಿಹಾರ ಅಥವಾ ಬೆಂಬಲ ತರಗತಿಗಳನ್ನು ಒದಗಿಸಬಹುದು.

(iv) ಪಠ್ಯಕ್ರಮದ / ತರಗತಿಯ ವೇಳಾಪಟ್ಟಿಯಲ್ಲಿ ವಿದ್ಯಾರ್ಥಿಗಳಿಗೆ ವಿಶ್ರಾಂತಿ ಮತ್ತು ಚೇತರಿಕೆ ದೊರಕುವಂತೆ ಸೂಕ್ತ ಅಂತರವನ್ನು ಕೊಡಬೇಕು ಮತ್ತು ಹೀಗೆ, ಅವರ ಮೇಲೆ ಹೆಚ್ಚುವರಿ ಒತ್ತಡವನ್ನು ಉಂಟುಮಾಡಬಾರದು.

(v) ತರಬೇತಿ ಕೇಂದ್ರವು ವಿದ್ಯಾರ್ಥಿಗಳಿಗೆ ಮತ್ತು ಬೋಧಕರಿಗೆ ವಾರಕ್ಕೊಮ್ಮೆ ರಜೆಯನ್ನು ಕೊಡಬೇಕು.

(vi) ವಾರದ ರಜೆಯ ನಂತರದ ದಿನದಂದು ಯಾವುದೇ ಮೌಲ್ಯಮಾಪನ-ಪರೀಕ್ಷೆ/ಪರೀಕ್ಷೆ ಇರಬಾರದು.

(vii) ಆಯಾ ಪ್ರದೇಶದ ಪ್ರಮುಖ ಮತ್ತು ಜನಪ್ರಿಯ ಹಬ್ಬಗಳ ದಿನ, ಕೋಚಿಂಗ್ ಸೆಂಟರ್ ರಜೆಯನ್ನು ನೀಡಬೇಕು, ವಿದ್ಯಾರ್ಥಿಗಳು ತಮ್ಮ ಕುಟುಂಬದೊಂದಿಗೆ ಕಾಲಕಳೆಯಲು ಮತ್ತು ಭಾವನಾತ್ಮಕ ಸಂಬಂಧ ಬೆಳೆಯಲು ಸಾಧ್ಯವಾಗುತ್ತದೆ.

(viii) ಕೋಚಿಂಗ್ ಸೆಂಟರ್‌ಗಳು ವಿದ್ಯಾರ್ಥಿಗೆ ಅತಿಯಾಗದ ರೀತಿಯಲ್ಲಿ ತರಬೇತಿ ತರಗತಿಗಳನ್ನು ನಡೆಸಬೇಕು ಮತ್ತು ಇದು ದಿನಕ್ಕೆ 5 ಗಂಟೆಗಳಿಗಿಂತ ಹೆಚ್ಚು ಇರಬಾರದು ಮತ್ತು ತರಬೇತಿ ಸಮಯವು ಬೆಳಗಿನ ಜಾವ ಬೇಗನೆ ಅಥವಾ ರಾತ್ರಿ ತಡವಾಗಿಯೂ ಇರಬಾರದು.

(ix) ಕೋಚಿಂಗ್ ಸೆಂಟರ್‌ಗಳು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯನ್ನೂ, ಅರಿವಿನ ಸಾಮರ್ಥ್ಯಗಳನ್ನೂ ಹೆಚ್ಚಿಸಲು ಸಹಪಠ್ಯ ಚಟುವಟಿಕೆಗಳಿಗೆ ತರಗತಿಗಳನ್ನು ಆಯೋಜಿಸಬೇಕು. ಕೋಚಿಂಗ್ ಸೆಂಟರ್‌ಗಳು, ಮುಖ್ಯ ವಿಷಯಗಳನ್ನು ಬೋಧಿಸುವಾಗ ಬೋಧಕರು, ಉದ್ಯೋಗಿಗಳು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಜೀವನ ಕೌಶಲ್ಯ, ವೈಜ್ಞಾನಿಕ ಮನೋಭಾವ ಮತ್ತು ಪುರಾವೆ ಆಧಾರಿತ ಚಿಂತನೆಯ ಅಭಿವೃದ್ಧಿಯ ಕುರಿತು ಕೌನ್ಸಿಲಿಂಗ್; ಸೃಜನಶೀಲತೆ ಮತ್ತು ನವೀನತೆ; ದೇಹದಾರ್ಢ್ಯ, ಕ್ಷೇಮ, ಭಾವನಾತ್ಮಕ ಬಂಧ ಮತ್ತು ಮಾನಸಿಕ ಯೋಗಕ್ಷೇಮ, ಸಮಸ್ಯೆಗಳು, ಪ್ರೇರಣೆ; ಸಹಯೋಗ ಮತ್ತು ಸಹಕಾರದಿಂದ ಮಾಡುವ ತಂಡದ ಕೆಲಸ; ಸಮಸ್ಯೆ ಪರಿಹಾರ ಮತ್ತು ವಯೋಧರ್ಮದ ತಾರ್ಕಿಕತೆ; ನೈತಿಕ ಮತ್ತು ನೈತಿಕ ತಾರ್ಕಿಕತೆ; ಮಾನವ ಮತ್ತು ಸಾಂವಿಧಾನಿಕ ಮೌಲ್ಯಗಳ ಜ್ಞಾನ ಮತ್ತು ಅನುಷ್ಠಾನ; ವೈಯಕ್ತಿಕ ಸುರಕ್ಷತೆ (ಲಿಂಗ ಸಂವೇದನಶೀಲಗೊಳಿಸಿಕೆ ಮತ್ತು ನಿಂದನೆ ತಡೆಗಟ್ಟುವಿಕೆ); ಮೂಲಭೂತ ಕರ್ತವ್ಯಗಳು; ಪೌರತ್ವ ಕೌಶಲ್ಯಗಳು ಮತ್ತು ಮೌಲ್ಯಗಳು; ಭಾರತದ ಜ್ಞಾನ; ಪರಿಸರ ಜಾಗೃತಿ, ನೈರ್ಮಲ್ಯ ಮತ್ತು ಇತ್ಯಾದಿ ಸೆಷನ್(ತರಗತಿ)ಗಳನ್ನು ಆಯೋಜಿಸಬೇಕು.

**10.2 ಕೋಚಿಂಗ್ ಸೆಂಟರ್‌ನ ನೀತಿ ಸಂಹಿತೆ**

(i) ಪ್ರತಿ ತರಗತಿ/ಬ್ಯಾಚ್‌ನಲ್ಲಿ ಸೇರಿಸಿಕೊಳ್ಳಬೇಕಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಪ್ರಾಸ್ಪೆಕ್ಟಸ್‌ನಲ್ಲಿ ಸ್ಪಷ್ಟವಾಗಿ ಹೇಳಬೇಕು ಮತ್ತು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಯಾವುದೇ ಸಂದರ್ಭದಲ್ಲೂ ಕೋರ್ಸ್‌ನ ಅವಧಿದಲ್ಲಿ ವರ್ಗ/ಬ್ಯಾಚ್‌ನಲ್ಲಿ ಸಂಖ್ಯೆಯನ್ನು ಹೆಚ್ಚಿಸಬಾರದು.

(ii) ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿ ತರಗತಿಯಲ್ಲಿ ಆರೋಗ್ಯಕರ ಶಿಕ್ಷಕ-ವಿದ್ಯಾರ್ಥಿ ಅನುಪಾತವನ್ನು ಕಾಪಾಡಿಕೊಳ್ಳುವ ಅವಶ್ಯಕತೆಗಳಿಗೆ ಅನುಗುಣವಾಗಿರಬಹುದು ಮತ್ತು ಬೋಧಕ ಮತ್ತು ಸಲಹೆಗಾರರೊಂದಿಗೆ ಸಂಬಂಧವನ್ನು ನಿರ್ಮಿಸುವಂತಿರಬೇಕು. ವಿದ್ಯಾರ್ಥಿಗಳು ಬೋಧಕರೊಂದಿಗೆ ಸಂಪರ್ಕ ಹೊಂದಲು ಸಾಧ್ಯವಾಗುವಂತಿರಬೇಕು ಮತ್ತು ವಿದ್ಯಾರ್ಥಿಗೆ ಪರದೆ / ಕಪ್ಪು ಹಲಗೆ ಸುಲಭವಾಗಿ ಕಾಣುವಂತಿರಬೇಕು.

(iii) ಕೋಚಿಂಗ್ ಸೆಂಟರಿಗೆ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಯನ್ನು ಸೇರಿಸಿಕೊಳ್ಳಬಾರದು ಅಥವಾ ವಿದ್ಯಾರ್ಥಿ ದಾಖಲಾತಿಯು ಮಾಧ್ಯಮಿಕ ಶಾಲಾ ಪರೀಕ್ಷೆಯ ನಂತರ ಮಾತ್ರ ಇರಬೇಕು.

(iv) ಪಠ್ಯಕ್ರಮಕ್ಕೆ ಸೇರ್ಪಡೆಗೊಳ್ಳುವ ಮೊದಲು ವಿದ್ಯಾರ್ಥಿಗಳಿಗೆ ಪರೀಕ್ಷೆಗಳ ತೊಂದರೆ, ಪಠ್ಯಕ್ರಮ, ತಯಾರಿಯ ತೀವ್ರತೆ ಮತ್ತು ವಿದ್ಯಾರ್ಥಿಗೆ ಅಗತ್ಯವಿರುವ ಪ್ರಯತ್ನಗಳ ಬಗ್ಗೆ ಚೆನ್ನಾಗಿ ತಿಳಿಸಬೇಕು.

(v) ಶೈಕ್ಷಣಿಕ ವಾತಾವರಣ, ಸಾಂಸ್ಕೃತಿಕ ಜೀವನ, ವಾಸ್ತವಿಕತೆಗಳು ಮತ್ತು ಶಾಲಾ ಮಟ್ಟದ ಪರೀಕ್ಷೆಗಳ ಸಿದ್ಧತೆಗೂ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೂ ಇರುವ ನಡುವಿನ ವ್ಯತ್ಯಾಸದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕು.

(vi) ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ಪ್ರವೇಶದ ಆಯ್ಕೆಗಳ ಹೊರತಾಗಿ, ಇತರ ವೃತ್ತಿ ಆಯ್ಕೆಗಳ ಬಗ್ಗೆ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಒದಗಿಸಬಹುದು, ಇದರಿಂದ ಅವರು ತಮ್ಮ ಭವಿಷ್ಯದ ಬಗ್ಗೆ ಒತ್ತಡಕ್ಕೆ ಒಳಗಾಗುವುದಿಲ್ಲ ಮತ್ತು ಪರ್ಯಾಯ ವೃತ್ತಿಗಳಲ್ಲಿ ಹೊಸದೊಂದು ಆಯ್ಕೆಯನ್ನು ಆರಿಸಿಕೊಳ್ಳಬಹುದು.

(vii) ವಿದ್ಯಾರ್ಥಿಯ ಸಾಮರ್ಥ್ಯವನ್ನು ನಿರ್ಣಯಿಸಲು ಪ್ರವೇಶ ಪರೀಕ್ಷೆ ಅಥವಾ ಅಣಕುಪರೀಕ್ಷೆಯನ್ನು ನಡೆಸಬಹುದು. ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಆಸಕ್ತಿಯ ಆಧಾರದ ಮೇಲೆ, ಕೋಚಿಂಗ್ ಸೆಂಟರ್ ವಿದ್ಯಾರ್ಥಿಗಳ ಸಾಮರ್ಥ್ಯದ ನೈಜ ನಿರೀಕ್ಷೆಯನ್ನು ಪೋಷಕರಿಗೆ ತಿಳಿಸುಬಹುದು ಮತ್ತು ಮುಂದಿನ ದಾರಿಯನ್ನು ಸೂಚಿಸಬಹುದು.

(viii) ಕೋಚಿಂಗ್ ಸೆಂಟರಿಗೆ ಸೇರಿಬಿಟ್ಟರೆ ವೈದ್ಯಕೀಯ, ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಕಾನೂನು ಇತ್ಯಾದಿ ಸಂಸ್ಥೆಗಳಲ್ಲಿ ಅಥವಾ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರವೇಶ ಗ್ಯಾರೆಂಟಿಯಲ್ಲ ಎಂದು ವಿದ್ಯಾರ್ಥಿಗಳಿಗೂ ಪೋಷಕರಿಗೂ ತಿಳಿಯಪಡಿಸಬೇಕು.

(ix) ಕೋಚಿಂಗ್ ಸೆಂಟರು ಮಾನಸಿಕ ಆರೋಗ್ಯ ವೃತ್ತಿಪರರ ಸಹಯೋಗದೊಂದಿಗೆ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯದ ಬಗ್ಗೆ ಕಾಲಕಾಲಕ್ಕೆ ಕಾರ್ಯಾಗಾರಗಳನ್ನೂ ಸಂವೇದನಶೀಲಗೊಳಿಸುವ ಸಭೆಗಳನ್ನು ನಡೆಸಬೇಕು.

(x) ಕೋಚಿಂಗ್ ಸೆಂಟರ್‌ನಲ್ಲಿ ಅಧ್ಯಾಪನ, ಕೋರ್ಸ್‌ನ ಕಾಲಾವಧಿ ಮತ್ತು ಕೋಚಿಂಗ್ ಸೆಂಟರ್‌ನಲ್ಲಿ ಲಭ್ಯವಿರುವ ಸೌಲಭ್ಯಗಳ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸಬೇಕು. ಅವರ ಮಕ್ಕಳ ಮೇಲೆ ಅನಗತ್ಯ ಮಾನಸಿಕ ಒತ್ತಡ ಮತ್ತು ನಿರೀಕ್ಷೆಯ ಹೊರೆಯ ಕೆಟ್ಟ ಪರಿಣಾಮಗಳ ಬಗ್ಗೆ ಅವರಿಗೆ ಸಲಹೆ ನೀಡಬಹುದು.

(xi) ತರಬೇತಿ ಕೇಂದ್ರವು ನಡೆಸಿದ ಮೌಲ್ಯಮಾಪನ ಪರೀಕ್ಷೆಯ ಫಲಿತಾಂಶವನ್ನು ಸಾರ್ವಜನಿಕವಾಗಿ ಪ್ರಕಟಿಸಬಾರದು. ಮೌಲ್ಯಮಾಪನ ಪರೀಕ್ಷೆಯನ್ನು ಗೌಪ್ಯವಾಗಿಟ್ಟುಕೊಂಡು, ಅದನ್ನು ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಕ್ಲುಪ್ತ ವಿಶ್ಲೇಷಣೆಗಾಗಿ ಇದನ್ನು ಬಳಸಬೇಕು ಮತ್ತು ಶೈಕ್ಷಣಿಕ ಮಟ್ಟ ಕುಸಿಯುತ್ತಿರುವ ವಿದ್ಯಾರ್ಥಿಗೆ ಈ ಮಾರ್ಗಸೂಚಿಯ ನಿಬಂಧನೆಗಳ ಪ್ರಕಾರ ಸೂಕ್ತ ಸಲಹೆಗಳನ್ನು ನೀಡಬೇಕು.

**11. ಸಲಹೆಗಾರರು ಮತ್ತು ಮನಶ್ಯಾಸ್ತ್ರಜ್ಞರ ಬೆಂಬಲ**

(i) ತೀವ್ರ ಸ್ಪರ್ಧೆ ಮತ್ತು ವಿದ್ಯಾರ್ಥಿಗಳ ಮೇಲೆ ಶೈಕ್ಷಣಿಕ ಒತ್ತಡದ ಕಾರಣ, ಕೋಚಿಂಗ್ ಸೆಂಟರ್‌ಗಳು ವಿದ್ಯಾರ್ಥಿಗಳ ಮಾನಸಿಕ ಯೋಗಕ್ಷೇಮಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಅದರ ವಿದ್ಯಾರ್ಥಿಗಳ ಮೇಲೆ ಅನಗತ್ಯ ಒತ್ತಡವನ್ನು ಹೇರದೆ ತರಗತಿಗಳನ್ನು ನಡೆಸಬಹುದು. ಅಲ್ಲದೆ, ತಾವ್ರವಾದ ವೇದನೆ ಮತ್ತು ಒತ್ತಡದ ಪರಿಸ್ಥಿತಿಯಲ್ಲಿರುವ ವಿದ್ಯಾರ್ಥಿಗಳನ್ನುದ್ದೇಶಿಸಿದ ನಿರಂತರ ಸಹಾಯವನ್ನು ಒದಗಿಸಲು ಅವರು ತಕ್ಷಣ ಕಾರ್ಯವಿಧಾನವನ್ನು ಒದಗಿಸಬೇಕು.

(ii) ಕೋಚಿಂಗ್ ಸೆಂಟರ್ ಕೌನ್ಸೆಲಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮತ್ತು ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಅದು ಸುಲಭವಾಗಿ ಲಭ್ಯವಾಗುವಂತೆ ಖಚಿತಪಡಿಸಿಕೊಳ್ಳಲು ಸಕ್ಷಮ ಪ್ರಾಧಿಕಾರವು ಕ್ರಮಗಳನ್ನು ತೆಗೆದುಕೊಳ್ಳಬಹುದು. ಮನೋವಿಜ್ಞಾನಿಗಳು, ಸಲಹೆಗಾರರ ಹೆಸರುಗಳು ಮತ್ತು ಅವರು ಸೇವೆಗಳನ್ನು ಸಲ್ಲಿಸುವ ಸಮಯದ ಬಗ್ಗೆ ಮಾಹಿತಿಯನ್ನು ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ನೀಡಬಹುದು. ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಪರಿಣಾಮಕಾರಿ ಮಾರ್ಗದರ್ಶನ ಮತ್ತು ಸಮಾಲೋಚನೆಗಳು ದೊರಕುವಂತೆ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದ ಸಲಹೆಗಾರರನ್ನು ನೇಮಿಸಬಹುದು.

(iii) ಮಾನಸಿಕ ಒತ್ತಡ ಮತ್ತು ಖಿನ್ನತೆಯ ಪರಿಹಾರಕ್ಕಾಗಿ ವಿದ್ಯಾರ್ಥಿಗಳಿಗೆ ಸಲಹೆ ನೀಡಲು ಮತ್ತು ಮಾನಸಿಕ ಚಿಕಿತ್ಸಾ ಸೇವೆಯನ್ನು ಬಳಸಿಕೊಳ್ಳಲು ಸಲಹೆಗಾರರು ಮತ್ತು ಅನುಭವಿ ಮನಶ್ಯಾಸ್ತ್ರಜ್ಞರನ್ನು ಒಳಗೊಳ್ಳಲು ತರಬೇತಿ ಕೇಂದ್ರಗಳನ್ನು ಪ್ರೋತ್ಸಾಹಿಸಲಾಗುತ್ತದೆ.

(iv) ವಿದ್ಯಾರ್ಥಿಯ ಆಸಕ್ತಿ, ಸಹಜಶಕ್ತಿ ಮತ್ತು ಸಾಮರ್ಥ್ಯಗಳನ್ನು ನಿರ್ಣಯಿಸಲು ವೃತ್ತಿ ಸಲಹೆಗಾರರನ್ನು ಸೇರಿಸಿಕೊಂಡು ಅದಕ್ಕೆ ಅನುಗುಣವಾಗಿ ಅತ್ಯುತ್ತಮ ವೃತ್ತಿಜೀವನವನ್ನು ಆಯ್ಕೆ ಮಾಡಲು ವಾಸ್ತವಿಕ

ನಿರೀಕ್ಷೆಗಳೊಂದಿಗೆ ವಿದ್ಯಾರ್ಥಿಗಳು ಮತ್ತು ಅವರ ಪೋಷಕರಿಗೆ ಮಾರ್ಗದರ್ಶನ ಮತ್ತು ಸಲಹೆಯನ್ನು ನೀಡಬಹುದು.

(v) ತರಬೇತಿ ಕೇಂದ್ರವು ಮಾನಸಿಕ ಆರೋಗ್ಯ ಮತ್ತು ಒತ್ತಡವನ್ನು ತಡೆಗಟ್ಟಲು ಪೋಷಕರು, ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ನಿಯತವಾಗಿ ಕಾರ್ಯಾಗಾರಗಳು ಮತ್ತು ಜಾಗೃತಿ ವಾರಗಳನ್ನು ಏರ್ಪಡಿಸಬಹುದು. ಇದು ಆರೋಗ್ಯ, ಉತ್ತಮ ಪೋಷಣೆ, ವೈಯಕ್ತಿಕ ಮತ್ತು ಸಾರ್ವಜನಿಕ ನೈರ್ಮಲ್ಯ, ಆಪತ್ತ್ ಪ್ರತಿಕ್ರಿಯೆ ಮತ್ತು ಪ್ರಥಮ ಚಿಕಿತ್ಸೆಯಲ್ಲಿ ಮೂಲಭೂತ ತರಬೇತಿ, ಜೊತೆಗೆ ಮದ್ಯ, ತಂಬಾಕು ಮತ್ತು ಇತರ ನಶೀಲಿ ಪದಾರ್ಥಗಳ ಹಾನಿಕಾರಕ ಹಾಗೂ ಅಪಾಯಕಾರಿ ಪರಿಣಾಮಗಳ ವೈಜ್ಞಾನಿಕ ವಿವರಣೆಯ ಬಗ್ಗೆ  ಗಮನಹರಿಸಬೇಕು. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ, ಅಪಘಾತವನ್ನೆದುರಿಸುವ ಶಕ್ತಿ ಮತ್ತು ಜವಾಬ್ದಾರಿಯುತ ಸ್ವ-ಆರೈಕೆಯ ಸಂದರ್ಭದಲ್ಲಿ ಕೇಂದ್ರದಿಂದ ಮಾತಾಪಿತೃಗಳಿಗಾಗಿ ಆಯೋಜಿಸಲಾದ ಸಂವಾದದ ಅಧಿವೇಶನದಲ್ಲಿ ಧನಾತ್ಮಕ ಪಾಲನೆಯ ವಿಷಯವನ್ನು ಸಹ ಒತ್ತಿಹೇಳಬೇಕು.

(vi) ಬೋಧಕರು ವಿದ್ಯಾರ್ಥಿಗಳಿಗೆ ಸುಧಾರಣೆಯ ಕ್ಷೇತ್ರಗಳ ಕುರಿತು ಪರಿಣಾಮಕಾರಿಯಾಗಿ ಮತ್ತು ಸೂಕ್ಷ್ಮವಾಗಿ ಮಾಹಿತಿಯನ್ನು ತಿಳಿಸಲು ಮಾನಸಿಕ ಆರೋಗ್ಯ ಸಮಸ್ಯೆಗಳ ತರಬೇತಿಗೆ ಒಳಗಾಗಬಹುದು.

(vii) ಕೌನ್ಸೆಲಿಂಗ್‌ನ  ಅಂಗವಾಗಿ ಕೋಚಿಂಗ್ ಸೆಂಟರ್ ವರಿಷ್ಠರ ತಂಡದ ಸಂವಾದವನ್ನು ಸ್ಥಾಪಿಸಬೇಕು. ತರಬೇತಿ ಕೇಂದ್ರವು ಚರ್ಚೆಗಳು, ಸ್ಪರ್ಧೆಗಳು ಮತ್ತು ಯೋಜನೆಗಳಲ್ಲಿ ತಂಡ ಆಧಾರಿತ ಪಠ್ಯಕ್ರಮದ ಅಭ್ಯಾಸಪಾಠಗಳನ್ನು ಆಯೋಜಿಸಬಹುದು.

(viii) ತರಗತಿಯಲ್ಲಿ ಪಾಠಹೇಳಿಕೊಟ್ಟ ಶಿಕ್ಷಕರೇ ವಿದ್ಯಾರ್ಥಿಯ ಸಂದೇಹಗಳನ್ನು ಪರಿಹರಸಬೇಕು, ಇದರಿಂದ ವಿದ್ಯಾರ್ಥಿಗೆ ತೃಪ್ತಿಯಾಗುತ್ತದೆ.

(ix) ತರಬೇತಿ ಕೇಂದ್ರವು ಈ ಕೆಳಗಿನಂತೆ ಸಂಸ್ಥೆಯಲ್ಲಿ ಮಾನಸಿಕ ಆರೋಗ್ಯವನ್ನು ಉತ್ತೇಜಿಸುವ ಚೌಕಟ್ಟನ್ನು ಅನುಸರಿಸಬೇಕು:

| ಮಾನಸಿಕ ಆರೋಗ್ಯ | ಸಾಧನೆಗಾಗಿ | ಯೋಜನೆ |
|---|---|---|
| **ಸಮಸ್ಯೆಗಳ ಮಟ್ಟ** | **ಯಾರು ಯಾರು ಭಾಗಿದಾರರು** | **ಹಸ್ತಕ್ಷೇಪದ ಮಟ್ಟ** |
| ಮಾನಸಿಕ ಯೋಗಕ್ಷೇಮ | ಸಂಸ್ಥೆಗಳ ಇಡೀ ಸಮುದಾಯ | ಸಾಂಸ್ಥಿಕ ಪಠ್ಯಕ್ರಮದಲ್ಲಿ ಮಾನಸಿಕ ಯೋಗಕ್ಷೇಮವನ್ನು ಸಂಯೋಜಿಸಲಾಗಿದೆ |
| ಮಾನಸಿಕ ಆರೋಗ್ಯ ಜ್ಞಾನ ವರ್ತನೆಗಳು ಮತ್ತು ನಡವಳಿಕೆ | ಎಲ್ಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರು | ಮಾನಸಿಕ ಯೋಗಕ್ಷೇಮ - ಸಾಮಾನ್ಯ ಆರೋಗ್ಯ ಪಠ್ಯಕ್ರಮದ ಭಾಗ |
| ಮಾನಸಿಕ ಸಾಮಾಜಿಕ ಸಮಸ್ಯೆಗಳು | ಸಲಹೆಗಾರರು, ಬೋಧಕರು, ವರಿಷ್ಠರು, ಮಾರ್ಗದರ್ಶಕರು, ವಾರ್ಡನ್‌ಗಳು ಮತ್ತು ನಾಗರಿಕರು | ಅಗತ್ಯವಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ನೆರವನ್ನು ವಿಸ್ತರಿಸುವುದು |
| ತೀವ್ರ ಸಮಸ್ಸೆಗಳು / ಅಸ್ವಸ್ಥತೆಗಳು | ಸಲಹೆಗಾರರು, ಸಾಂಸ್ಥಿಕ ವೈದ್ಯರು ಮತ್ತು ಇತರ ತಜ್ಞರು | ವೃತ್ತಿಪರ ನಿರ್ವಹಣೆ |

**12. ಒಳಗೊಳ್ಳುವಿಕೆ ಮತ್ತು ಸುಗಮಶೀಲತೆ**

(i) ಕೋಚಿಂಗ್ ಸೆಂಟರ್ ಪ್ರವೇಶ ಮತ್ತು ಬೋಧನಾ ಪ್ರಕ್ರಿಯೆಯಲ್ಲಿ ಯಾವುದೇ ಅರ್ಜಿದಾರ/ವಿದ್ಯಾರ್ಥಿಯ ವಿರುದ್ಧ ಧರ್ಮ, ಜನಾಂಗ, ಜಾತಿ, ಲಿಂಗ, ಹುಟ್ಟಿದ ಸ್ಥಳ, ಸಂತತಿ ಇತ್ಯಾದಿಗಳ ಆಧಾರದ ಮೇಲೆ ತಾರತಮ್ಯ ಮಾಡಬಾರದು.

(ii) ವಿದ್ಯಾರ್ಥಿನಿಯರು, ವಿಕಲಚೇತನ ವಿದ್ಯಾರ್ಥಿಗಳು ಮತ್ತು ತುಚ್ಛೀಕರಿಸಿದ ಗುಂಪುಗಳ ವಿದ್ಯಾರ್ಥಿಗಳಂತಹ ದುರ್ಬಲ ಸಮುದಾಯಗಳ ವಿದ್ಯಾರ್ಥಿಗಳ ಹೆಚ್ಚಿನ ಪ್ರಾತಿನಿಧ್ಯವನ್ನು ಪ್ರೋತ್ಸಾಹಿಸಲು ಕೋಚಿಂಗ್ ಸೆಂಟರ್‌ನಿಂದ ವಿಶೇಷ ವ್ಯವಸ್ಥೆಗಳನ್ನು ಮಾಡಬಹುದು.

(iii) ಕೋಚಿಂಗ್ ಸೆಂಟರಿನ ಕಟ್ಟಡ ಮತ್ತು ಸುತ್ತಮುತ್ತಲಿನ ಆವರಣವು ದಿವ್ಯಾಂಗ ಸ್ನೇಹಿಯಾಗಿರಬೇಕು ಮತ್ತು ವಿಕಲಚೇತನರ ಹಕ್ಕುಗಳ ಕಾಯಿದೆ, 2016 ರ ನಿಬಂಧನೆಗಳಿಗೆ ಅನುಗುಣವಾಗಿರಬೇಕು.

(iv) ಬೋಧಕರು ಕಲಿಕೆಯಲ್ಲಿ ಅಸಮರ್ಥತೆಗಳ ಬಗ್ಗೆ ಜಾಗೃತಗೊಂಡು ಮತ್ತು ಕಲಿಕೆಯಲ್ಲಿ ಸಾಮರ್ಥ್ಯವಿರದ ವಿದ್ಯಾರ್ಥಿಗಳಿಗೆ ಸುಖಕರವಾಗುವಂತೆ ಮಾಡಬಹುದು.

(v) ಬ್ರೈಲ್ ಲಿಪಿ, ಇ-ರೀಡರ್‌ಗಳು ಮತ್ತು ಶೌಚಾಲಯಗಳು ಮುಂತಾದ ದಿವ್ಯಾಂಗ-ಸ್ನೇಹಿ ವ್ಯವಸ್ಥೆಗಳನ್ನು ಸಾಧ್ಯವಾದೆಡೆ ಮಾಡಬಹುದು.

(vi) ತಮ್ಮ ಶಿಕ್ಷಣದಲ್ಲಿ ಹೆಚ್ಚುವರಿ ಬೆಂಬಲ ಅಗತ್ಯವಿರುವ ವಿಕಲಾಂಗ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ತರಗತಿಗಳನ್ನು ಒದಗಿಸಬಹುದು.

(vii) ಶೈಕ್ಷಣಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ಬೇರೆ ಬೇರೆ ಗುಂಪುಗಳನ್ನು ಮಾಡಬಾರದು, ಏಕೆಂದರೆ ಇದು ಅವರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಿ ವಿದ್ಯಾರ್ಥಿಗಳ ಮೇಲೆ ಅತಿಯಾದ ಒತ್ತಡಕ್ಕೆ ಕಾರಣವಾಗುತ್ತದೆ. ವಿದ್ಯಾರ್ಥಿಗಳ ಪ್ರವೇಶ ಕ್ರಮದಲ್ಲಿ ತಂಡಗಳನ್ನು ರಚಿಸಬೇಕು ಮತ್ತು ಕೋರ್ಸ್ ಪೂರ್ಣಗೊಳ್ಳುವವರೆಗೆ ತಂಡವನ್ನು ಬದಲಾಯಿಸಕೂಡದು.

**13. ದಾಖಲೆಗಳ ನಿರ್ವಹಣೆ (ಸುಸ್ಥಿತಿಯಲ್ಲಿಡುವುದು)**

(i) ಕೋಚಿಂಗ್ ಸೆಂಟರ್ ಸರ್ಕಾರವು ಸೂಚಿಸಬಹುದಾದಂತಹ ದಾಖಲೆಗಳು, ಲೆಕ್ಕಪತ್ರ, ರಿಜಿಸ್ಟರ್‌ಗಳು ಅಥವಾ ಇತರ ದಾಖಲೆಗಳನ್ನು ಡಬೇಕು ಮತ್ತು ಒದಗಿಸಬೇಕು.

(ii) ಕೋಚಿಂಗ್ ಸೆಂಟರು ವಾರ್ಷಿಕ ವರದಿಯನ್ನು ದಾಖಲೆಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

**14. ಕೋಚಿಂಗ್ ಸೆಂಟರಿನ ಸ್ಥಳಾಂತರದ ಮೇಲಿನ ನಿರ್ಬಂಧ**

ಕೋಚಿಂಗ್ ಸೆಂಟರ್ ನೋಂದಣಿ ಪ್ರಮಾಣಪತ್ರದಲ್ಲಿ ಸೂಚಿಸಲಾದ ಸ್ಥಳದಲ್ಲಿ ಮಾತ್ರ ತರಬೇತಿಯನ್ನು ನಡೆಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದ ಪೂರ್ವ ಲಿಖಿತ ಅನುಮೋದನೆಯಿಲ್ಲದೆ ಅದರ ನೋಂದಾಯಿತ ಸ್ಥಳವನ್ನು ಬಿಟ್ಟು ಬೇರೆ ಯಾವುದೇ ಸ್ಥಳಕ್ಕೆ ಸ್ಥಳಾಂತರಿಸಬಾರದು.

**15. ಕೋಚಿಂಗ್ ಸೆಂಟರ್‌ನ ಚಟುವಟಿಕೆಗಳ ವಿಚಾರಣೆ**

ಸಕ್ಷಮ ಪ್ರಾಧಿಕಾರ, ಅಥವಾ ಸರ್ಕಾರದಿಂದ ಅಧಿಕಾರ ಪಡೆದ ಯಾವುದೇ ಇತರ ಅಧಿಕಾರಿಯು ಕೋಚಿಂಗ್ ಸೆಂಟರ್‌ನ ಚಟುವಟಿಕೆಗಳನ್ನು ನಿರಂತರವಾಗಿ ಪರಿಶೀಲಿಸಬೇಕು ಮತ್ತು ಯಾವುದೇ ಕೋಚಿಂಗ್ ಸೆಂಟರ್‌ನ ನೋಂದಣಿಗೆ ಅಗತ್ಯವಾದ ಅರ್ಹತೆಗಳು ಇವೆಯೇ ಮತ್ತು ಕೇಂದ್ರದ ಚಟುವಟಿಕೆಗಳು ತೃಪ್ತಿಕರವಾಗಿವೆಯೆ ಎಂಬುದನ್ನು ಪರಿಶೀಲಿಸಬೇಕು.

**16. ದೂರುಗಳ ವಿಲೇವಾರಿ**

(i) ಕೋಚಿಂಗ್ ಸೆಂಟರ್‌ನ ವಿದ್ಯಾರ್ಥಿ, ಪೋಷಕರು ಅಥವಾ ಬೋಧಕರು / ಉದ್ಯೋಗಿಗಳು ಕೋಚಿಂಗ್ ಸೆಂಟರ್‌ನ ವಿರುದ್ಧವೂ, ಕೋಚಿಂಗ್ ಸೆಂಟರ್‌ಗಳಿಂದ ವಿದ್ಯಾರ್ಥಿಗಳ / ಪೋಷಕರ ವಿರುದ್ಧವೂ ಸಕ್ಷಮ ಪ್ರಾಧಿಕಾರದ ಮುಂದೆ ದೂರು ಸಲ್ಲಿಸಬಹುದಾಗಿದೆ. ಆ ದೂರುಗಳನ್ನು ಮೂವತ್ತು ದಿನಗಳೊಳಗೆ ಸಕ್ಷಮ ಪ್ರಾಧಿಕಾರ ಅಥವಾ ಸೂಕ್ತ ಸರ್ಕಾರವು ಉದ್ದೇಶಕ್ಕಾಗಿ ರಚಿಸಲಾದ ವಿಚಾರಣಾ ಸಮಿತಿಯು ವಿಲೇವಾರಿ ಮಾಡತಕ್ಕದ್ದು.

(ii) ಸಕ್ಷಮ ಪ್ರಾಧಿಕಾರದ ಅಥವಾ ವಿಚಾರಣಾ ಸಮಿತಿ ವರದಿಯ ಸುನಾವಣೆಗೆ ಅವಕಾಶ ನೀಡಿದ ನಂತರ, ಸಕ್ಷಮ ಪ್ರಾಧಿಕಾರವು ದಂಡವನ್ನು ವಿಧಿಸಬೇಕು ಅಥವಾ ನೋಂದಣಿ ರದ್ದತಿಗೆ ಕ್ರಮ ಕೈಗೊಳ್ಳಬೇಕು.

**17. ದಂಡಗಳು**

(1) ಸಕ್ಷಮ ಪ್ರಾಧಿಕಾರವು ಸಿವಿಲ್ ನ್ಯಾಯಾಲಯಗಳ ಅಧಿಕಾರವನ್ನು ಹೊಂದಿರತಕ್ಕದ್ದು. ಸಕ್ಷಮ ಪ್ರಾಧಿಕಾರವು ಯಾವುದೇ ಮೊಕದ್ದಮೆಯನ್ನು ಪರಿಗಣಿಸಲು ಸಿವಿಲ್ ಪ್ರೊಸೀಜರ್ ಕೋಡ್ 1908 (ಕೇಂದ್ರ ಕಾಯಿದೆ ಸಂಖ್ಯೆ 5, 1908) ಅಡಿಯಲ್ಲಿ ನ್ಯಾಯಾಲಯಗಳಲ್ಲಿ ನಿವೇದಿಸಲಾದ ಈ ಕೆಳಕಂಡ ಅಧಿಕಾರವನ್ನು ಹೊಂದಿರತಕ್ಕದ್ದು:-

(i) ಅಫಿಡವಿಟ್ ಮೂಲಕ ಪುರಾವೆಯೊಂದಿಗೆ ದಾಖಲೆಗಳನ್ನು ಸ್ವೀಕರಿಸಲು;

(ii) ಯಾವುದೇ ವ್ಯಕ್ತಿಯ ಹಾಜರಾತಿಗೆ ಆದೇಶಿಸಲು ಮತ್ತು ಜಾರಿಗೊಳಿಸಲು ಮತ್ತು ಪ್ರಮಾಣ ವಚನದ ಮೇಲೆ ಅವನನ್ನು ಪರೀಕ್ಷಿಸಲು;

(iii) ದಾಖಲೆಗಳನ್ನು ಹಾಜರುಪಡಿಸುವಂತೆ ಒತ್ತಾಯಿಸಲು; ಮತ್ತು

(iv) ವೆಚ್ಚವನ್ನು ನೀಡುವಂತೆ ವಿಧಿಸಲು

(2) ನೋಂದಣಿಯ ಯಾವುದಾದರೂ ಷರತ್ತುಗಳ ವಿಧಿವಿಧಾನಗಳನ್ನು ಅಥವಾ ಸಾಮಾನ್ಯ ನಿಯಮಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ತರಬೇತಿ ಕೇಂದ್ರವು ಈ ಕೆಳಗಿನಂತೆ ದಂಡಗಳಿಗೆ ಒಳಗಾಗುತ್ತದೆ:

(i) ಮೊದಲ ಅಪರಾಧಕ್ಕೆ ರೂ 25,000/-

(ii) ಎರಡನೇ ಅಪರಾಧಕ್ಕೆ ರೂ. 1,00,000/-

(iii) ನಂತರದ ಅಪರಾಧಕ್ಕಾಗಿ ನೋಂದಣಿಯ ರದ್ದತಿ.

**18. ನೋಂದಣಿ ರದ್ದತಿ**

ಮಾರ್ಗಸೂಚಿಗಳು ಅಥವಾ ನೋಂದಣಿಯನ್ನು ಮಂಜೂರು ಮಾಡಿದಾಗ ವಿಧಿಸಿದ ಯಾವುದೇ ನಿಯಮಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಲಾಗಿದೆ ಎಂದು ಕಂಡುಬಂದಲ್ಲಿ, ಕೋಚಿಂಗ್ ಸೆಂಟರ್ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದೆ ಎಂದು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ಮನವರಿಕೆಯಾದಲ್ಲಿ, ಸಂಬಂಧಿತ ಕಾನೂನಿನ ಉಲ್ಲಂಘನೆಗಾಗಿ ತೆಗೆದುಕೊಳ್ಳಬಹುದಾದ ಯಾವುದೇ ದಂಡದ ಕ್ರಮಗಳಿಗೆ ಯಾವುದೇ ಹಾನಿ ಇಲ್ಲದಂತೆ ಕೋಚಿಂಗ್ ಸೆಂಟರ್‌ಗೆ ನೀಡಲಾದ ನೋಂದಣಿ ಪ್ರಮಾಣಪತ್ರವನ್ನು ಯಾವುದೇ ಸಮಯದಲ್ಲಿ ರದ್ದುಗೊಳಿಸಬಹುದು:

ಅಂಥ ನೋಂದಣಿ ಪ್ರಮಾಣಪತ್ರವನ್ನು ಹೊಂದಿರುವವರಿಗೆ ಉದ್ದೇಶಿತ ಆದೇಶದ ವಿರುದ್ಧ ಕಾರಣ ನೀಡಬೇಕೆಂಬ ಅವಕಾಶ ನೀಡದೆ, ಸಕ್ಷಮ ಪ್ರಾಧಿಕಾರದಿಂದ ಅಂಥ ಆದೇಶ ನೀಡುವಂತಿಲ್ಲ.

**19. ಮೇಲ್ಮನವಿ ಸಲ್ಲಿಸುವ ಕಾರ್ಯವಿಧಾನ**

ಕೋಚಿಂಗ್ ಸೆಂಟರ್‌ಅನ್ನು ನೋಂದಾಯಿಸಲು ಅಥವಾ ನೊಂದಾವಣೆಯನ್ನು ನವೀಕರಿಸಲು ಅಥವಾ ನೋಂದಣಿಯನ್ನು ರದ್ದುಗೊಳಿಸಲು ಹೊರಡಿಸಿದ ಆದೇಶದಿಂದ ಅನ್ಯಾಯಕ್ಕೆ ಒಳಗಾದ ಯಾವುದೇ ವ್ಯಕ್ತಿಯು ಅಂತಹ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ಸರ್ಕಾರದಿಂದ ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಬಹುದು.